# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಶ್ರೀ ಮಂದರ್ತಿ ಕ್ಷೇತ್ರ ಮಹಾತ್ಮೆ

ಕವಿ

## ಸೀತಾನದಿ ಗಣಪಯ್ಯ ಶೆಟ್ಟಿ

ಅಂತರಜಾಲ ಆವೃತ್ತಿ ಪ್ರಕಾಶಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ಮೇ ೩೦, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com

## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಲಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಲಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ


# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಿಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ  ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ  ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ದರ್ಶನವಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಜೈಮಿನಿ ಭಾರತ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಗೊತ್ತಿಲ್ಲ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೨೩೮

**ಪಾತ್ರಗಳು:**

ಈಶ್ವರ, ಪಾರ್ವತಿ, ಶಂಖಚೂಡ, ದೇವರತಿ, ನಾಗರತಿ, ಚಾರುರತಿ, ಮಂದರತಿ, ನೀಲರತಿ, ನಂದಿ, ವ್ಯಾಘ್ರಪಾದ (ಮುನಿ), ರತ್ನಧ್ವಜ (ಮತ್ಸ್ಯ ದೇಶದ ದೊರೆ), ದೇವವರ್ಮ (ಅವಂತಿಯ ರಾಜ), ಮಹಿಷಾಸುರ (ರಕ್ಕಸ), ಮಾಲಿನಿ (ಮಹಿಷಾಸುರನ ತಾಯಿ), ಸುದೇವ (ಬ್ರಾಹ್ಮಣ ಋಷಿ), ರಾಜಾದಿತ್ಯ (ಹೇಮಾದ್ರಿಯ ರಾಜ), ಜಲಜಾಕ್ಷಿ(ರಾಜಾದಿತ್ಯ ಪುತ್ರಿ), ಶ್ರೀ ದುರ್ಗಾಪರಮೇಶ್ವರಿ, ಮಹೋದರ (ಮಹಿಷಾಸುರನ ಸೇನಾನಿ), ಬ್ರಹ್ಮ, ಚಾಮುಂಡೇಶ್ವರಿ, ದುರ್ಮುಖ (ಮಹಿಷಾಸುರನ ಮಂತ್ರಿ), ವೀರಭದ್ರ, ಶಿವಗಣಗಳು, ದ್ವಾರಪಾಲಕ, ಬೇಡರು, ಹಾಯ್ಗುಳಿ, ಕಲ್ಕುಡ, ಬೊಬ್ಬರ್ಯ, ಹುಲಿದೇವರು, ವಿಷ ವೈದ್ಯ, ರಕ್ಕಸ, ದೂತ, ದರೋಡೆಗಾರರು, ಸುರಗಿಹಳ್ಳಿ ಅಂತು (ದರೋಡೆಗಾರ), ಆನೆ

**ಕಥಾ ಸಾರಾಂಶ:**

ಕೈಲಾಸದಲ್ಲಿ ಶಿವ ಪಾರ್ವತಿಯರ ಸಂಭಾಷಣೆ. ಪಾರ್ವತಿಯಿಂದ ಭೂಲೋಕವಾಸದ ಇಂಗಿತ, ಶಂಖಚೂಡನಿಂದ ಶಿವನ ಕುರಿತು ತಪಸ್ಸು, ಕೇದಾರವ್ರತದಿಂದ ದೇವರತಿ, ನಾಗರತಿ, ಚಾರುರತಿ, ಮಂದರತಿ ಮತ್ತು ನೀಲರತಿ ಎಂಬ ಐದು ಪುತ್ರಿಯರ ಜನನ. ಸುಬ್ರಹ್ಮಣ್ಯಸ್ವಾಮಿಯನ್ನು ವರಿಸುವ ಇಚ್ಛೆಯಿಂದ ಕೈಲಾಸದತ್ತ ಪ್ರಯಾಣ. ನಂದಿಗೆ ಶಾಪ, ನಂದಿಯಿಂದ ಬಾಲೆಯರಿಗೆ ಶಾಪ. ಕಾಡಿನಲ್ಲಿ ಬಾಲೆಯರಿಗೆ ಮುನಿ ವ್ಯಾಘ್ರಪಾದರಿಂದ ಶಾಪ.

ರತ್ನಾಖ್ಯನಿಂದ ಸೋತ ದೇವವರ್ಮನಿಗೆ ರಾಜ್ಯವಿಯೋಗ, ದೇವವರ್ಮನಿಂದ ಕಾಡ್ಗಿಚ್ಚಿಗೆ ಸಿಲುಕಿದ ನಾಗಕನ್ಯೆ ಬಾಲೆಯರ ರಕ್ಷಣೆ, ಮುನಿ ವ್ಯಾಘ್ರಪಾದರಿಂದ ಬೇಡರ ಬಾಲೆ ಮಾಲಿನಿಯಲ್ಲಿ ಮಹಿಷನ ಜನನ, ಮಹಿಷನಿಂದ ಬ್ರಹ್ಮನ ಕುರಿತು ತಪಸ್ಸು, ಅಜೇಯನಾಗುವ ವರ, ಬ್ರಾಹ್ಮಣ ಸುದೇವನಿಗೆ ನಾಗದೋಷದಿಂದ ಕುಷ್ಠವ್ಯಾಧಿ, ಮಂದರ್ತಿ ಕ್ಷೇತ್ರದಲ್ಲಿ ಸುಬ್ರಹ್ಮಣ್ಯನ ಕುರಿತು ತಪಸ್ಸು, ದೇವವರ್ಮನಿಂದ ಹೇಮಾದ್ರಿಯ ರಾಜಕುಮಾರಿ ಜಲಜಾಕ್ಷಿಯ ಉಪಚಾರ, ವಿಷ ವಿಮೋಚನೆ, ದೇವವರ್ಮನಿಗೆ ಹೇಮಾದ್ರಿಯ ಪಟ್ಟ, ಜಲಜಾಕ್ಷಿಯೊಡನೆ ವಿವಾಹ.

ಮಹಿಷನ ದೌಷ್ಟ್ಯ, ನದಿಯಲ್ಲಿ ಸ್ನಾನ ಮಾಡುವಾಗ ಮಹಿಷನಿಂದ ಜಲಜಾಕ್ಷಿಯ ಮಾನಭಂಗಕ್ಕೆ ಯತ್ನ, ದೇವವರ್ಮ ಮಹಿಷನ ನಡುವೆ ಯುದ್ಧ, ಪರಾಜಿತನಾದ ದೇವವರ್ಮ ಮಡದಿಯೊಂದಿಗೆ ಮಂದರ್ತಿ ಕ್ಷೇತ್ರಕ್ಕೆ ಪಲಾಯನ, ಮುನಿ ಸುದೇವನ ಬಳಿ ಆಶ್ರಯ, ಮುನಿ ಸುದೇವನಿಂದ ತಾಯಿ ದುರ್ಗಾಂಬಿಕೆ ಕಾಪಾಡುತ್ತಾಳೆ ಎಂಬ ಭರವಸೆ, ಮಹಿಷನ ಅಪ್ಪಣೆಯಂತೆ ಮಂತ್ರಿ ಮಹೋದರನಿಂದ ಆಕ್ರಮಣ, ಮುನಿ ಸುದೇವನಿಂದ ತಾಯಿ ದುರ್ಗಾಂಬಿಕೆಗೆ ಮೊರೆ, ದೇವಿಯ ಆಜ್ಞೆಯಂತೆ ವೀರಭದ್ರನಿಂದ ಮಹೋದರನ ಹತ್ಯೆ, ಯುದ್ಧಕ್ಕೆ ದುರ್ಮುಖನ ಆಗಮನ ಅಗ್ನಿವರ್ಷ, ತಾಯಿಯ ಅಪ್ಪಣೆಯಂತೆ ಹೈಗುಳಿಯಿಂದ ಅಗ್ನಿಪ್ರಾಶನ, ಕಲ್ಕುಡನಿಂದ ಶಿಲಾಕೋಟೆಯ ಧ್ವಂಸ, ಬೊಬ್ಬರ್ಯ ದೇವನಿಂದ

ದುರ್ಮುಖಿನ ಅಂತ್ಯ, ಹೈಗುಳಿಯಿಂದ ಶವಕ್ಕೆ ಅಗ್ನಿಸ್ಪರ್ಶ, ಉರಿವ ಶವದ ಅಗ್ನಿಯ ಮೇಲೆ ಹೈಗುಳಿಯ ನರ್ತನ. ಕೆರಳಿದ ಮಹಿಷ ಸ್ವತಃ ಯುದ್ಧಕ್ಕೆ ಸನ್ನದ್ಧ, ಮಾತೆ ದುರ್ಗಾಂಬಿಕೆಯು ತನ್ನ ಶೂಲದಿಂದ ಮಹಿಷನನ್ನು ಕೊಲ್ಲುತ್ತಾಳೆ. ತಾಯಿಯಿಂದ ನಂದಿಯ ಶಾಪ ವಿಮೋಚನೆ.

ಸುರಗಿಹಳ್ಳಿಯ ಅಂತು ಎಂಬುವನಿಂದ ಗುಡ್ಡೆಯ ಗಣಪ ದೇವಾಲಯದ ಮೇಲೆ ದಾಳಿ, ಗಣಪತಿ ಆನೆ ರೂಪದಿಂದ ಪ್ರತಿರೋಧ, ಒಂದು ಪೆಟ್ಟಿಗೆ ಕೊಂಡೊಯ್ಯಲು ಗಣಪತಿಯಿಂದ ಅನುಮತಿ, "ಆನೆಗುಡ್ಡೆ" ಎಂಬ ಅಭಿದಾನ, ಪೆಟ್ಟಿಗೆಯೊಳಗಿನ ಗಣಪತಿ ವಿಗ್ರಹ ಮತ್ತು ಗೆಜ್ಜೆಯೊಂದಿಗೆ ಮಂದರ್ತಿ ಕ್ಷೇತ್ರಕ್ಕೆ ಪ್ರಯಾಣ, ಕ್ಷೇತ್ರದಲ್ಲಿ ಹರಕೆ ಬಯಲಾಟಕ್ಕೆ ಮುನ್ನುಡಿ. ಮಂದರ್ತಿ ಕ್ಷೇತ್ರದ ತಾಯಿ ದುರ್ಗಾಂಬಿಕೆಯನ್ನು ಕೊಂಡಾಡುವುದರೊಂದಿಗೆ ಪ್ರಸಂಗ ಪರಿಸಮಾಪ್ತಿಯಾಗುತ್ತದೆ.

**ಕವಿ ಪರಿಚಯ : (ಆಧಾರ: ಕರ್ನಾಟಕ ಯಕ್ಷಗಾನ ಕವಿ ಚರಿತ್ರೆ – ಡಾ. ಕಬ್ಬಿನಾಲೆ ವಸಂತ ಭಾರಧ್ವಾಜ)**

ಸೀತಾನದಿ ಗಣಪಯ್ಯ ಶೆಟ್ಟಿ ಇವರು (ಕ್ರಿ. ಶ. ೧೯೧೯ - ೧೯೮೩) ಯಕ್ಷಗಾನದ ಪ್ರಮುಖ ಪ್ರಸಂಗಕರ್ತರಲ್ಲಿ ಒಬ್ಬರು. ಶ್ರೀ ಗಣಪಯ್ಯ ಶೆಟ್ಟಿಯವರು ದಿನಾಂಕ ೪ನೇ ಜೂನ್ ೧೯೧೯ರಲ್ಲಿ ಹೆಬ್ರಿ ಸಮೀಪದ ಸೀತಾನದಿ ಗ್ರಾಮದಲ್ಲಿ ಜನಿಸಿದರು. ತಂದೆ ಶ್ರೀ ಕೊರಗಪ್ಪ ಶೆಟ್ಟರು ಮತ್ತು ತಾಯಿ ಶ್ರೀಮತಿ ನಾಗಮ್ಮ. ಅವರು ಪ್ರಾಥಮಿಕ ಶಿಕ್ಷಣವನ್ನು ಹೆಬ್ರಿಯಲ್ಲಿ ಪಡೆದರು. ಉನ್ನತ ಶಿಕ್ಷಣದ ಸಹಾಯಕ್ಕಾಗಿ ಶ್ರೀ ಐರೋಡಿ ನರಸಿಂಹ ಹೆಬ್ಬಾರರ ಸಂಪರ್ಕಕ್ಕೆ ಬಂದ ಗಣಪಯ್ಯ ಶೆಟ್ಟರಿಗೆ ಭಾಗವತ, ಜೈಮಿನಿ ಭಾರತ, ಕುಮಾರಭಾರತ ಮೊದಲಾದ ಪುರಾಣ ಗ್ರಂಥಗಳ ಆಳ – ವಿಸ್ತಾರದ ಅರಿವಾಯಿತು. ಉನ್ನತ ಶಿಕ್ಷಣದ ನಂತರ ವೃತ್ತಿಯಲ್ಲಿ ಅಧ್ಯಾಪಕರಾದ ಗಣಪಯ್ಯ ಶೆಟ್ಟರು ಕಾರ್ಕಳ ಮತ್ತು ಹಿರಿಯಡ್ಕದ ಶಾಲೆಗಳಲ್ಲಿ ಸೇವೆ ಸಲ್ಲಿಸಿದರು. ೧೯೩೪ರಲ್ಲಿ ಯಕ್ಷಗಾನ ತಾಳಮದ್ದಲೆ ಅರ್ಥದಾರಿಯಾಗಿ ಕಲಾಸೇವೆ ಪ್ರಾರಂಭ. ಮುಖ್ಯವಾಗಿ ಪಾತ್ರಪೋಷಣೆಯ ಜೊತೆಗೆ ಸ್ತ್ರೀಪಾತ್ರಗಳಿಗೆ ವಿಶೇಷ ಗೌರವ ಮತ್ತು ಮನ್ನಣೆಯನ್ನು ದೊರಕಿಸಿಕೊಟ್ಟವರು ಗಣಪಯ್ಯ ಶೆಟ್ಟರು. ೧೯೩೮ರಲ್ಲಿ ತಾಳಮದ್ದಲೆಯ ಪ್ರಾಕಾರಕ್ಕಾಗಿಯೇ ಸ್ಥಾಪಿತಗೊಂಡ 'ಯಕ್ಷಕಲಾ ಮಂಡಳಿ, ಉಡುಪಿ'ಯು ಅವರ ಕಲಾಪ್ರತಿಭೆಯ ಅನಾವರಣಕ್ಕೊಂದು ಪ್ರಮುಖ ವೇದಿಕೆಯಾಯಿತು. ೧೨ ಅರ್ಥ ಸಹಿತ ಪ್ರಸಂಗಗಳ ಜೊತೆಗೆ ಹಲವಾರು ಸಾಮಾಜಿಕ ಮತ್ತು ಪೌರಾಣಿಕ ಪ್ರಸಂಗಗಳ ರಚನಾಕಾರರು ಶ್ರೀ ಸೀತಾನದಿ ಗಣಪಯ್ಯ ಶೆಟ್ಟರು. ಹೆಬ್ರಿ ತಾಲೂಕಿನ ಕನ್ನಡ ಸಾಹಿತ್ಯ ಸಮ್ಮೇಳನದ ವೇದಿಕೆಯ ಮೂಲಕ ಇವರಿಗೆ ಸಾಹಿತ್ಯಾಸಕ್ತರು ಮತ್ತು ಕಲಾಪ್ರೇಮಿಗಳಿಂದ ಗೌರವ ಸಮರ್ಪಣೆಯಾಗಿದೆ.

ಇವರು ಬರೆದ ಪ್ರಸಂಗಗಳು: ಅಪ್ಸರೆಯ ಅವಾಂತರ, ಕರ್ಣಪಟ್ಟಾಭಿಷೇಕ, ಕುತೀಸ್ವಯಂವರ, ಗಣೇಶಮಹಾತ್ಮೆ, ಗಂಡುಗಲಿ ಭೀಮಸೇನ, ಚಿತ್ರಾಂಗದಾ, ಚ್ಯವನೋಪಖ್ಯಾನ, ಜಗಜ್ಜಟ್ಟಿ ಜರಾಸಂಧ, ಧನುರ್ಧರ ಧನಂಜಯ, ಮಾಲತೀಪರಿಣಯ, ರುದ್ರಾಕ್ಷಿಮಹಿಮೆ, ವಾಲಿವಿಜಯ, ವಿಶ್ವಾಮಿತ್ರಮೇನಕಾ, ವೀರವಜ್ರಾಂಗ, ಶಕುಂತಲಾಪರಿಣಯ, ಶನೀಶ್ವರಮಹಾತ್ಮೆ, ಸತೀ ಸೌದಾಮಿನೀ, ಸಹದೇವ ದಿಗ್ವಿಜಯ, ಹರಿಣಾಕ್ಷಿ ಪರಿಣಯ, ಕಾಂತಬಾರೆ ಬುದಾಬಾರೆ, ಕೊಡ್ದಬ್ಬು-ತನ್ನಿಮಾನಿಗ, ಗುರುಗುಂಜಿ ಬನ್ನಾಳು, ತುಳುನಾಡ ಸಿರಿದೇವಿ, ಪಂಜುರ್ಲಿ ಪ್ರತಾಪ, ಬೀರುಕಲ್ಕುಡ, ಬೈಕಾಡ್ತಿ ಪ್ರತಾಪ, ಭೂತಾಳ ಪಾಂಡ್ಯ, ಕುಕ್ಕುಟಾಸುರ ಸಂಹಾರ, ಧರ್ಮಸ್ಥಳ ಕ್ಷೇತ್ರ ಮಹಾತ್ಮೆ, ಬಪ್ಪನಾಡು ಕ್ಷೇತ್ರಮಹಾತ್ಮೆ, ಮಂದರ್ತಿ ಕ್ಷೇತ್ರಮಹಾತ್ಮೆ, ಮುಂಡ್ಕೂರು ಕ್ಷೇತ್ರಮಹಾತ್ಮೆ, ಹಿರಿಯಡಕ ಕ್ಷೇತ್ರಮಹಾತ್ಮೆ, ಚಂದ್ರಗುಪ್ತವಿಜಯ, ನಸ್ಸೀರವಿಜಯ, ಸಂಯೋಗಿತಾಪರಿಣಯ, ಸತ್ಯಾಶ್ರಯ ಪುಲಕೇಶಿ, ಚಂದ್ರಪ್ರಭಾ ಪರಿಣಯ, ಜಯಚಂದ್ರ ಪರಾಜಯ, ಮಲಯಾಂಬಿಕಾ, ಮಾಣಿಕ್ಯಪುರ ಮಹಿಮೆ, ರಾಣಿ ರತ್ನಾವಳಿ, ರಾಣಿ ಮಣಿಮಾಲಿನಿ, ರಾಷ್ಟ್ರವಿಜಯ, ವೀರಚಂದ್ರಧ್ವಜ, ವೀರಪುಷ್ಪಧ್ವಜ, ಶೂರಶತಧನ್ವ, ಶೂರಶುಭಸೇನ, ಶೈಲಿನಿ ಶಪಥ, ಸತೀ ಮಹಾಶ್ವೇತೆ, ಸಾಧ್ವಿ ಸದಾರಮಾ, ಸೋಮಪ್ರಭಾ ಪರಿಣಯ, ಜಾಲಕೊರತಿ, ಬಂಗಾರ್ದ ಚಿಂಗಾರಿ, ಮಾಯಾ ಜುಮಾದಿ, ಸೊನ್ನೆ ಸೈರಗೆ

**ಟಿಪ್ಪಣಿ** :

ಮಂದರ್ತಿ ಮೇಳದಲ್ಲಿ ಹೆಚ್ಚು ಪ್ರಯೋಗಗೊಳ್ಳುವ ಪ್ರಸಂಗ

# ಪ್ರಸಂಗ ಸಾಹಿತ್ಯ

**ವಾರ್ಧಕ**
ಶ್ರೀರಮಾರಮಣ ಜಗದೋದ್ಧರಣ ಭಯಹರಣ |
ಕಾರುಣ್ಯನಿಧಿ ಶರಣಜನದುರಿತವನದಹನ |
ನೀರಜಾಕ್ಷಮರಗಣವಂದ್ಯ ಶುಭಪ್ರದಚರಣ ಪನ್ನಗೇಂದ್ರಾರಿಗಮನ ||
ಕ್ಷೀರಾಂಬುನಿಧಿಶಯನ ಗೋವರ್ಧನೋದ್ಧರಣ |
ಮಾರಪಿತ ಭವಹರಣ ಕೋಟಿಚಂದಿರಕಿರಣ |
ವೀರರಾವಣಹನನ ವರ ಕೌಸ್ತುಭಾಭರಣ ಸುಜನಜನಸಂಜೀವನ || ೧ || [ ೧ ]

**ಭಾಮಿನಿ**
ಹರ ಕುಮಾರನ ಭಯ ನಿವಾರಣ |
ದುರಿತ ದೂರನ ವಿಘ್ನವಾರಣ |
ಹರಿಯ ಕರುಣಾಕರನ ಲಂಬೋದರ ವಿನಾಯಕನ ||
ಪರಶು ಪಾಶಾಂಕುಶಿ ಗಣೇಶನ |
ಶರಣ ಜನರಂ ಕಾವ ಪಾವನ |
ಚರಣನನು ನೆನೆ ನೆನೆದು ತೊಡಗುವೆನೀಗಲೀ ಕೃತಿಯ || ೧ || [ ೨ ]

**ಕಂದ ಪದ್ಯ**
ಸರಸತಿ ಭಾರತಿ ವಿಧಿಸತಿ |
ವರ ಕರುಣಾಮೃತ ಶರನಿಧಿ ತವಪದಗಳನುಂ ||
ಕರಗಳ ಜೋಡಿಸಿ ನುತಿಪೆಂ |
ಕರುಣಿಸು ವಾಕ್ಸಿರಿ ಕೃತಿ ಮತಿಗತಿ ಮಂಗಲಮಂ || ೧ ||

ಉಮೆಯಂ ಶಿವೆ ನಿರುಪಮೆಯಂ |
ಶಮೆದಮೆಯೊದಗಿಸಿ ಭ್ರಮೆಯ ನಿವಾರಿಸುತೆಮಗಂ ||
ಸಮನಿಸು ಬುದ್ಧಿಯ ಸಿದ್ಧಿಯ |
ಸುಮನಸವಂದಿತೆ ಸಲಹೆನುತಾನುಂ ನುತಿಪೆಂ || ೨ || [ ೪ ]

**ಪರಿವರ್ಧಿನಿವೃತ್ತ**
ಹರನಮ್ಮಜನಂ ಸುರದಿಗಧಿಪರಂ |
ನೆರೆ ಮುನಿವರರಂ ವರಕವಿಜನರಂ |
ಹರಸುವುದೆನುತಂ ತೊಡಗುವೆ ದೇವಿಯ ಸಚ್ಚರಿತಾಮೃತಮಂ ||
ಗಿರಿಜೆಯು ಬರೆಸಲು ಸುಕವಿ ಸುಧಾರ್ಣವ |
ನೊರೆದೆಂ ಗಣಪಯ ಶೆಟ್ಟಿಯು ಇದನುಂ |
ಮೆರೆಸುವುದಿಪ್ಪತ್ತೈದನೆ ಸತ್ಕೃತಿ ಯಕ್ಷಗಾನದೊಳಂ || ೧ || [ ೫ ]

**ಕಾಂಭೋದಿ - ಝಂಪೆ**
ಒಂದು ದಿನ ಶಿವ ಗಿರಿಜೆ | ಯೊಂದಿಗತಿ ವೈಭವದಿ |
ನಂದಿ ಗಣಪತಿ ಭೃಂಗಿ ಗುಹರಾ ||
ಚಂದದಲಿ ಕೂಡಿ ಮೆರೆ | ದೆಂದ ಕೈಲಾಸದಲಿ |
ವೃಂದಾರಕರ ನೋಡಿ ನಗುತಾ || ೧ ||

ಕೇಳಿರೈ ನೀವೆಲ್ಲ | ಭೂಲೋಕವಳೆಯುವರೆ |
ಕೋಲೆಂಬ ತೆರದಿ ಹಿಮಗಿರಿಯೂ ||
ಮೇಲೆನಿಪ ತರುಲತೆಗ | ಳೋಳಿಯಲ್ಲರಳೆ ಸುಮ |
ಜಾಲದೊಳು ನಲಿದುಲಿವ ಭ್ರಮರ || ೨ ||

ಕರಡಿ ಹುಲಿ ಶಾರ್ದೂಲ | ಹರಿಣ ಹರಿ ಕಸ್ತೂರಿ |
ಮರಿ ಹಂಸ ನವಿಲು ಗಿಣಿ ಪಿಕವೂ ||
ಗರುಡ ನಾಗಾದಿಗಳು | ಮರೆತು ಹಗೆತನ ಮೆರೆವ |
ಪರಿಯ ನೋಡಿದಿರೆ ನೀವೆಲ್ಲ || ೩ || [ ೮ ]

**ಕೇದಾರಗೌಳ - ಅಷ್ಟ**
ಗಿರಿಜೆ ಕೇಳುತ ನಗು | ತೆರಗುತೆಂದಳು ಕಾಂತ |
ಪರಮೇಶ ಶಾಂತಮೂರ್ತಿ ||
ಇರುವೆಡೆ ಕಾಮ ಕ್ರೋಧಾದಿಗಳ್ಪಳಿವುವೆ |
ಪರಮ ಮಂಗಲದಾಯಕ || ೧ ||

ಭೂಲೋಕದಲಿ ನಿಮ್ಮ | ಲೀಲೆಯನೇನೆಂಬೆ |
ಬಾಳುತಲಿರುವ ಜನ ||
ಹಾಳಾದ ವ್ಯಸನದಿ | ಕೋಳುಗೊಂಡಿಹರೆಲ್ಲ |
ಮೇಲೆತ್ತಬಾರದೇನು || ೨ ||

ಕರ್ಮ ಭೂಮಿಯೊಳ್ಸ | ದ್ಧರ್ಮದಿಂದಿರೆ ಸುಖ |
ನಿರ್ಮಲ ಮನವಿಹುದು ||
ದುರ್ಮಾನವರು ಸ್ವಾರ್ಥ | ಕರ್ಮದಿ ನಡೆದರೆ |
ಪೆರ್ಮೆಯ ಹೊಂದುವರೆ || ೩ ||

ನಿನಗಿರೆ ಕನಿಕರ | ಮನವುದ್ಧರಿಸಲು ಧಾ |
ರಿಣಿಯೊಳು ನೆಲಸುತಲಿ ||
ಮನವ ತಿದ್ದುತ ನೀನು | ಜನಗಳಿಷ್ಟಾರ್ಥವ |
ಅನುಗ್ರಹಿಸುತ ಪಾಲಿಸು || ೪ || [ ೧೨ ]

**ಭಾಮಿನಿ**
ಹರನು ನಗುತಿಂತೆನಲು ಪಾರ್ವತಿ |
ಪರಮ ತೋಷವ ತಾಳ್ದಳಿತ್ತಲು |
ಉರಗಲೋಕದಿ ಶೇಷಸಖನಹ ಶಂಖಚೂಡಾಖ್ಯ ||
ಸರುವ ಸಂಪದವೆರಸಿ ಧರಣಿಪ |
ಭರಿತ ವೈಭವದಿಂದಲಾಳುತ |
ಲಿರಲು ಸುತರಿಲ್ಲೆಂದು ಕೊರಗುತಲೀರ್ದ ದಿನದಿನದಿ || ೧ || [ ೧೩ ]

**ಸೌರಾಷ್ಟ್ರ - ತ್ರಿವುಡೆ**
ಆವ ಜನ್ಮದೊಳೇನು ಪಾಪವ |
ನಾವು ಗೈದೆವೊ ಆರ ಮಕ್ಕಳಿ |
ಗಾವ ಉಪಹತಿ ಎಸಗಿದೆವೊ ಇ | ನ್ನಾವ ಗತಿಯೂ || ೧ ||

ದಾನ ಧರ್ಮವ ಹೋಮ ಶಾಂತಿಯ |
ನೇನಗೈದರು ಸಂತತಿಯ ನಾವ್ |
ಕಾಣದಾದೆವು ಮರುಗಿ ಫಲವಿರ | ದೇನನೆಂಬೆ || ೨ ||

ಸರುವ ಸಂಪದ ತುಂಬಿ ತುಳುಕುವ |
ಧರೆಗೆ ಗತಿಯಿಂದಾಯ್ತು ಶಿವನನು |
ಮರೆಹುಗುವೆನೆನುತಡವಿಗೈದಿದ | ಚರಿಸಿ ತಪವ || ೩ ||

ಕಡುತರದ ನಿಯಮದಲಿ ತಪವನು |
ನಡೆಸಿದನು ಬಿಡದೈದು ವರುಷದಿ |
ಮೃಡನು ಮೈದೋರಲ್ಕೆ ಶಂಕರ | ನಡಿಗೆ ಮಣಿದು || ೪ || [ ೧೭ ]

**ಭಾಮಿನಿ**
ಶೂಲಿ ಶಂಕರ ಫಾಲಲೋಚನ |
ಬಾಲಚಂದಿರಫಾಲ ಗಿರಿಜಾ |
ಲೋಲ ಶಂಭು ವ್ಯಾಳಭೂಷಣ ನೀಲಕಂಠ ಶಿವ ||
ಕಾಲಕಂಧರಕಾಲ ಮೃಗಧರ |
ನೀಲಲೋಹಿತ ಭಕ್ತಮುನಿಜನ |
ಪಾಲ ಗಾನವಿಲೋಲ ಶುಭಗುಣಶೀಲ ಪೊರೆಯೆನ್ನಾ || ೧ || [ ೧೮ ]

**ನವರೋಜು - ಏಕ**
ಮೆಚ್ಚಿದೆನು ಉರಗೇಶ | ತಪ |
ಹೆಚ್ಚಿಸಿತು ಸಂತೋಷ ||
ಉಚ್ಚಗುಣಯುತ | ಸಚ್ಚರಿತನೆ ತಪ |
ನೆಚ್ಚಿದುದೇನೈ | ಉಚ್ಚರಿಸಾಶೆಯು || ೧ ||

ಲಾಲಿಪುದೂ ಪರಮೇಶಾ | ವರ |
ಪಾಲಿಪುದು ಜಗದೀಶ ||
ಬಾಲಕರಿಲ್ಲದ | ಬಾಳುವೆಯಾಯಿತು |
ಹಾಳಪ್ಪುದು ಧರೆ | ಪಾಲಿಸು ಮಕ್ಕಳ || ೨ ||

ಸುತಯೋಗ ನಿನಗಿಲ್ಲ | ನೀ |
ವ್ಯಥಿಸದಿರೂ ಕೇಳ್ ಸೊಲ್ಲ ||
ಅತಿಶಯ ಕೇದರ | ವ್ರತವಾಚರಿಸಲು |
ಸುತೆಯರು ಜನಿಪರು | ಸತಿಯೊಳಗೈವರು || ೩ || [ ೨೧ ]

**ಕಂದ ಪದ್ಯ**
ಹರ ಮೈಗರೆಯಲು ಅಹಿಪತಿ |
ತೆರಳುತೆ ಸತಿಯೊಳಗರುಹುತೆ ತೋಷದಿ ಬಳಿಕಂ ||
ವರಕೇದಾರವ್ರತವಾ |
ಚರಿಸಲಿಕೈವರು ಸುತೆಯರು ಜನಿಸಲಿಕಾಗಂ || ೧ || [ ೨೨ ]

**ವಾರ್ಧಕ**
ಭಾರಿ ಸಂತಸದಿಂದ ಜಾತಕರ್ಮವ ರಚಿಸಿ |
ಧಾರಿಣಿಪ ಅನುಕ್ರಮದಿ ದೇವರತಿ ನಾಗರತಿ |
ಚಾರುರತಿ ಮಂದರತಿ ನೀಲರತಿಯೆಂದೆನುವ ಪೆಸರಿಟ್ಟು ಸಲಹುತಿರಲೂ ||
ತೋರಿತಚ್ಚರಿ ಶುಕ್ಲಪಕ್ಷಚಂದ್ರಮನಂತೆ |
ಬೀರುತಾನಂದವನು ದಿನದಿನಕೆ ಬೆಳೆದರೈ |
ಮೂರು ಲೋಕದೊಳಿಲ್ಲ ರೂಪಿನೊಳಗೆಣೆಯೆನುವ ಕೀರ್ತಿ ಲೋಕವ ತುಂಬಿತು || ೧ || [ ೨೩ ]

**ಸೌರಾಷ್ಟ್ರ - ತ್ರಿವುಡೆ**
ಇತ್ತ ಕೇಳೈ ಶಂಖಚೂಡನ |
ಪುತ್ರಿಯರು ಗುಣ ರೂಪ ಯವ್ವನ |
ವೆತ್ತಿ ಮೆರೆದಿರೆ ಗುಹಗೆ ಕೊಡುವುದೆ | ನುತ್ತ ಮನದಿ || ೧ ||

ಇರಲಿಕೊಂದಿನ ಮೃತಿಯನೈದಲು |
ಹಿರಿಯಳನು ಅರಸಾಗಿ ನೇಮಿಸೆ |
ತರುಣಿಯರು ಕೂಡುತ್ತ ಮನದಲಿ | ಯೋಚಿಸಿದರು || ೨ ||

ಮದುವೆಯಾಗದೆ ಬಾಳು ಶೋಭಿಸ |
ದಿದು ಸಮಾಜದ ನಿಯಮ ಅದರಿಂ |
ದೊದಗಿನಿಂ  ಕೈಲಾಸ ಸೇರುತ | ಮುದದಿ ಶಿವನ || ೩ ||

ಪಾದಕೆರಗುತ ಬೇಡೆ ನಮ್ಮನು |
ಆ ದಯಾನಿಧಿ ಸಲಹುವನು ಸರಿ |
ಯಾದ ಮಾರ್ಗವಿದೆನುತ ಬರೆ ರಜ | ತಾದ್ರಿಯಲ್ಲಿ || ೪ ||

ಹರನ ಗಣ ನಂದೀಶ ದ್ವಾರದೊ |
ಳಿರಲು ಬಂದಿಹ ನಾಗಕನ್ಯೆಯ |
ರಿರವ ತಿಳಿಯೆ  ವಿಚಾರಿಸಿದನಾ | ಹರನ ಭೃತ್ಯ || ೫ || [ ೨೮ ]

**ಕಾಂಭೋದಿ - ಅಷ್ಟ**
ಯಾರವ್ವಾ | ನೀವು | ಯಾರವ್ವ || ಪಲ್ಲ ||
ಯಾರವ್ವ ಕನ್ಯೆಯರೈವರೊಟ್ಟಾಗಿ |
ಸಾರುವಿರೆಲ್ಲಿಗೆ ಪೇಳಿ ಗುಟ್ಟಾಗಿ ||
ಮಾರಹರನ ಬಳಿ ಮುನಿಯಮರರಿಗೆ |
ಸಾರಲಪ್ಪಣೆಯಿದೆ ಇಲ್ಲುಳಿದರಿಗೆ || ಯಾರವ್ವ || ೧ || [ ೨೯ ]

**ಶಂಕರಾಭರಣ - ಆದಿ**
ಪನ್ನಗೇಂದ್ರ ಶಂಖಚೂಡ |
ಕನ್ಯೆಯೈವರಾವು ಸುಬ್ರ |
ಹ್ಮಣ್ಯನನ್ನು ವರಿಸೆ ಹರನ | ಕಾಣಬಂದೆವು || ೧ || [ ೩೦ ]

**ಕಾಂಭೋದಿ - ಅಷ್ಟ**
ದುರಿತ ವಿದೂರರು ನಿಷ್ಕಾಮಿ ಜನರು |
ಅರಿಯೆಂಬ ಷಡ್ವರ್ಗ ಜಯಸಿದಂತವರು ||
ವರ ವಿಷಯಾ ಸುಖದಾಶೆ ಬಿಟ್ಟವರು |
ಪರಮೇಶನನು ಕಾಂಬರಲ್ಲುಳಿದವರು || ಯಾರವ್ವ || ೧ || [ ೩೧ ]

**ಶಂಕರಾಭರಣ - ಆದಿ**
ಈಶ ಗಿರಿಜೆಯರನು ನೋಳ್ಪ |
ಆಶೆಯಿಂದ ಬಂದವರ ನಿ |
ರಾಶೆಗೊಳಿಸಬೇಡವಯ್ಯ | ಈಶಭೃತ್ಯನೆ || ೧ ||

ಅರ್ಹರಲ್ಲದವರ ಬಿಡಲು |
ಶರ್ವ ಕೋಪಿಸುವನು ನಿಮ್ಮ |
ಸರ್ವಥಾನು ಬಿಡಲಿಕಿಲ್ಲ | ಸಾರ್ವೆ ಸಾಮದಿ || ೨ || [ ೩೩ ]

**ಮಾರವಿ - ಏಕ**
ಭಕ್ತರಾದೆಮ್ಮನು ವ್ಯರ್ಥದಿ ತಡೆದಿಹ |
ಧೂರ್ತ ಗಣಾಧಮನೆ ||
ಪೃಥ್ವಿಯೊಳಗೆ ಖಳ ರಕ್ಕಸ ಜನ್ಮವ |
ನೆತ್ತುತ್ತ ಬಾಳೆಲವೊ || ೧ ||

ತಾಮಸಗುಣದಿಂ ಶಪಿಸಲು ಕೆರಳುತ |
ಕಾಮುಕ ನಾರಿಯರೆ ||
ಕಾಮಿತ ಫಲಿಸದೆ ಹೋಗಲಿ ನೆಲಸಿರಿ |
ಭೂಮಿಯೊಳ್ ಬೇರ್ಬೇರೆ || ೨ ||

ಕೋಪದೊಳುರಿವವಿವೇಕಿಗಳೇ ಪ್ರ |
ಲಾಪಿಸಿರಡವಿಯಲಿ ||
ವ್ಯಾಪಿಸಿರುತ್ತಿಹ ಕಾಳ್ಗಿಚ್ಚಿನ ನಡು |
ತಾಪವ ಪಡಿರೆಂದ || ೩ || [ ೩೬ ]

**ಸಾಂಗತ್ಯ - ರೂಪಕ**
ನಂದಿಯ ಶಾಪದಿ | ಸುಂದರಿಯರು ವ್ಯಥೆ |
ಗೊಂಡು ಶೋಕಿಸುತಾಶಾಭಂಗ ||
ಹೊಂದಿ ಭೀತಿಯ ತಾಳಿ | ಮುಂದೇನು ಗತಿಯೆಂದು |
ಕಂದರ್ಪಾರಿಯ ಪಾದ ನೆನೆದು || ೧ ||

ಜಗದಾದಿರೂಪಾದಿ | ಮಧ್ಯಾಂತರಹಿತನೆ |
ಸುಗುಣ ನಿರ್ಗುಣ ನಿರಾಕಾರ ||
ಜಗದೀಶನವ್ಯಕ್ತ | ಮೃಗಧರ ಶಿವಪದ |
ಯುಗಳವ ನಂಬಿ ನಾವಿಹೆವು || ೨ ||

ನಂಬಿದವರ ಕಾವ | ನೆಂಬ ಬಿರುದ ದೇವ |
ಶಂಭು ಶಂಕರ ಮಹದೇವ ||
ತುಂಬಿದ ಕರುಣದೊ | ಳಿಂಬಿತ್ತು ಪೊರೆ ಎನೆ |
ಶಂಭು ಪಾರ್ವತಿ ಮೈಯ ತೋರೆ || ೩ ||

ಅಡಿಗೆರಗಿದವರ | ಪಿಡಿದೆತ್ತಿ ಕರುಣಾಳು |
ನುಡಿರಡಸಿಹ ದುಃಖವೆನಲು ||
ಮೃಡ ನಿನ್ನ ವರದಿಂದ | ಪಡೆದು ಜನ್ಮವ ಗುಹ |
ನೊಡನೆ ಲಗ್ನದ  ಆಶೆಯಿಂದ || ೪ ||

ಬಂದಿರೆ ಶಪಿಸಿದ | ನಂದಿಯು ನಮಗಿನ್ನು |
ಮುಂದೇನು ಗತಿ ಪೇಳು ಶಿವನೆ ||
ಎಂದು ಮರುಗುವಹಿ | ನಂದನೆಯರಿಗೆಂದ |
ಅಂಧಕಮರ್ದನ ಶಿವನು || ೫ ||  [ ೪೧ ]

**ಭಾಮಿನಿ**
ಭೃತ್ಯ ನಂದಿ ಸಮರ್ಥನಾಗಿಹ |
ವ್ಯರ್ಥವಾಗದು ಶಾಪವುಭಯರ |
ನಿತ್ಯ ನೆಲೆಸಿರಿ ಸುಬ್ರಹ್ಮಣ್ಯನ ಬಳಿಯೊಳ್ಬೇರ್ಬೇರೆ ||
ಮತ್ತೆ ಪಾರ್ವತಿ ನುಡಿದಳಳಲದಿ |
ರಿತ್ತಪೆನು ನಿಮ್ಮೊಡನೆ ಸರ್ವದ |
ಭಕ್ತರನು ಪೊರೆಯುತ್ತ ಇಷ್ಟಾರ್ಥಗಳ ಕರುಣಿಸುತಾ || ೧ || [ ೪೨ ]

**ಕೇದಾರಗೌಳ - ಝಂಪೆ**

ಗಿರಿಜೇಶರುಲಿಯ ಕೇಳಿ | ದರುಶನದಿ |
ತರಳೆಯರು ತೋಷತಾಳಿ ||
ತೆರಳಿ ಬಂದರು ಶಾಪವ | ನೆನೆ ನೆನೆದು |
ಕೊರಗಿ ಪಡೆದರು ತಾಪವ || ೧ ||

ಹರ ಗಿರಿಜೆಯರ ಕಂಡರೂ | ಪರಿಹಾರ |
ದೊರಕದಿರೆ ಧರೆಗಿಳಿದರು ||
ಸುರವನವ ಧಿಕ್ಕರಿಸುತ | ಸಹ್ಯಾದ್ರಿ |
ಇರಲದರ ಚೆಲು ಸವಿಯುತ || ೨ ||

ಸುತ್ತಲಿನ ವನರಾಜಿಯಾ | ಗಗನವನು |
ಮುತ್ತಿಡುವ ವೃಕ್ಷತತಿಯಾ ||
ಕತ್ತಲೆಯ ನೆಲಸುಮನೆಯ | ಮೃಗ ಪಕ್ಷಿ |
ಸುತ್ತಾಡುತಿರುವ ಬಗೆಯ || ೩ ||

ಬಿದಿರ ಮೆಳೆಯೊಂದ ನೋಡಿ | ನೆಲಸಲೆಂ |
ದದರೆಡೆಯೊಳ್ಮನವ ಮಾಡಿ ||
ಸುದತಿಯರು ಅಹಿರೂಪದಿ | ನೆಲಸುತ್ತ |
ಬದುಕಿದರು ಮರುಗಿ ಮನದಿ || ೪ || [ ೪೬ ]

**ಸುರುಟಿ - ಏಕ**

ಬಂದನು ನಂದೀಶ | ಹರಪದ |
ಕೊಂದಿಸಿ ಕೇಳೀಶ ||
ಇಂದ್ರಿಯ ಸುಖದಭಿಲಾಷೆಯೊಳ್ ಬಂದಹಿ |
ಕಂದರ ತಡೆಯಲ್ಕೆಂದರು ಕೋಪದಿ || ೧ ||

ಮೃಡನೆಡೆಗಾವಿಂದು | ಬಂದರೆ |
ತಡೆದೆಯ ನೀನಿಂದು ||
ಕಡು ದುರುಳನೆ ನೀ ಪೊಡವಿಯೊಳ್ ರಕ್ಕಸ |
ಮದಮುಖನೆನಿಸುತ ಬದುಕುವುದೆಂದರು || ೨ ||

ಗಿರಿಜೆಯು ನಸುನಗುತ | ಸಹಜವು |
ತರಳೆಯರಿಗೆ ಸತತ ||
ಅರಿಯಲು ಬಹುದಿತ್ತೆಮ್ಮಭಿಮತವನು |
ಸರಿಯಿಲ್ಲೆಂಬೆನೆ ತವ ಕರ್ತವ್ಯವು || ೩ ||

ಕನ್ಯೆಯರಾ ಶಾಪಾ | ಹುಸಿಯದು |
ಇನ್ನೇಕೈ ತಾಪ ||
ಮನ್ನಿಸಿ ಪೊಡವಿಯೊಳುನ್ನತ ರಕ್ಕಸ |
ನೆನ್ನಿಸು ಮುಕ್ತಿಯು ಎನ್ನಿಂದಪ್ಪುದು || ೪ ||

ಶಂಕರ ಅಸ್ತೆನುತ | ಹರಸಲು |
ಕಿಂಕರ ಪೊಡಮಡುತ ||
ಬಿಂಕವನುಳಿದಾತಂಕದೊಳೈದಿದ |
ಶಂಕರ ಸಲಹು ಸುಖಂಕರನೆನುತಲಿ || ೫ || [ ೫೧ ]

**ಭಾಮಿನಿ (ಅರ್ಧ)**
ನಾಗಕನ್ಯೆಯರೊಂದು ದಿನ ಹಸಿ |
ವಾಗೆ ಆಹಾರವನು ಹುಡುಕುತ |
ಸಾಗಿರಲು ಕಾನನದಿ ವಿಧಿಯಾಟವನು ಲಾಲಿಪುದು || ೧ || [ ೫೨ ]

**ಕೇದಾರಗೌಳ - ಅಷ್ಟ**
ದುರ್ಗಮ ಕಾನನ | ಮಾರ್ಗದಿ ಯಾತ್ರೆಗೆ |
ವ್ಯಾಘ್ರಪಾದೆಂಬ ಮುನಿ ||
ದೀರ್ಘ ಪ್ರಯಾಣದಿ | ವ್ಯಗ್ರ ಮಾನಸನಾಗಿ |
ಶೀಘ್ರದಿ ಸಾಗಿರಲು || ೧ ||

ಮಾನಿನಿಯರು ಕಂಡು | ಮನದಿ ಭಯವಗೊಂಡು |
ಕಾನಾ ವಸತಿಗೆಂದು ||
ಬಾಣವೇಗದಿ ಓಡ | ಲಾ ಸರಭರ ಶಬ್ದ |
ಮೌನಿ ಹೌಹಾರಿದನು || ೨ ||

ಕೆರಳಿ ಕೆಂಪೇರಿದ | ಅರಳಿದಕ್ಷಿಗಳಿಂದ |
ಪರಿಕಿಸಿದನು ಸುತ್ತಲು ||
ಉರಗಗಳೈದು ಬಿ | ದಿರ ಮೆಳೆ ಸೇರ್ವುದ |
ನಿರುಕಿಸಿ ಕೋಪದಲಿ || ೩ || [ ೫೫ ]

**ಸೌರಾಷ್ಟ್ರ - ತ್ರಿವುಡೆ**
ಎಲವೊ ಕಾಡೊಳು ನೆಲಸಿ ಮಾರ್ಗದೊ |
ಳಲೆವರನು ಕಂಗೆಡಿಸಿದಿರಿ ಬಿದಿ |
ರ್ಮೆಳೆಯ ಹೊರ ಚಲಿಸದಿರಿ ಗೂಡಿನ | ಇಲಿಗಳಂತೆ || ೧ ||

ಮುನಿಯ ಶಾಪದ ನುಡಿಯ ಕೇಳುತ |
ವನಿತೆಯರು ಬೆದರುತ್ತ ಹಾಹಾ |
ಇನಿತು ಕುರುವಿನ ಮೇಲೆ ಬೊಕ್ಕೆಯೆ | ಎನುತ ಮರುಗಿ || ೨ ||

ಮುನಿ ಕುಲೋತ್ತಮ ನಿರಪರಾಧಿಗ |
ಳಿನಿತು ಕೇಡನು ಬಗೆದರಲ್ಲವು |
ವನದಿ ನಿಮ್ಮನು ಕಂಡು ಅಡಗುವೆ | ವೆನುತ ನಾವು || ೩ ||

ಬಿದಿರ ಮೆಳೆಯೆಡೆ ಧಾವಿಸಿದೆವಾವ್ |
ಮೊದಲೆ ಶಾಪವಿದಗ್ಧರೆಮ್ಮನು |
ಸದಯ ಮುನಿಪ ವಿಶಾಪವೀಯುತ | ಮುದದಿ ಸಲಹು || ೪ || [ ೫೯ ]

**ಭಾಮಿನಿ**
ತರುಣಿಯರ ನುಡಿ ಕೇಳಿ ನಿಜವೆಂ |
ದರಿತು ಮಕ್ಕಳೆ ಶಾಪ ಹುಸಿಯದು |
ಮರುಗದಿರಿ ಸ್ವಲ್ಪಾವಕಾಶದಿ ಬರುವ ನೃಪನಿಂದ ||
ಉರುವ ಶಾಪ ನಿವೃತ್ತಿಯಪ್ಪುದು |
ಇರದು ಹಸುತೃಷೆಯನಿತು ದಿನವೆಂ |
ದೊರೆದು ತೆರಳಿದನಿತ್ತ ಕೇಳ್ಪುದು ಬಳಿಕ ನಡೆದುದನು || ೧ || [ ೬೦ ]

**ಕಾಂಭೋದಿ - ಝಂಪೆ**

ಮತ್ಸ್ಯದೇಶದ ಭೂಪ | ರತ್ನಾಖ್ಯನೊಂದು ದಿನ |
ಮಾತ್ಯನೊಳು ಯೋಚಿಸಿದನಿಂತು ||
ಹತ್ತು ವರುಷದ ಹಿಂದೆ | ಕಿತ್ತುಕೊಂಡಿಹ ನಮ್ಮ |
ಪೃಥ್ವಿಯರ್ಧವ ದೇವವರ್ಮ || ೧ ||

ಅಂದಿನಿಂದೀವರೆಗೆ | ಸಂಧಿ ಸಾಧಿಸುತೀರ್ದೆ |
ಬಂದಿತುತ್ತಮ ಕಾಲವೀಗ ||
ಮಂದಿಯನು ನೆರಹುತ್ತ | ಸಂಧಿಸುವೆ ರಣದಲ್ಲಿ |
ಕೊಂದವನ ರಾಜ್ಯ ಸೆಳಕೊಂಬೆ || ೨ ||

ಭರಿತ ಸೇನೆಯ ಕೂಡಿ | ಪುರಕೆ ಮುತ್ತಿಗೆಯಿಡಲು |
ಚರರು ತಡೆಯುತ ನೊಂದು ಮರುಗಿ ||
ದೊರೆ ದೇವವರ್ಮನಿಂ | ಗರಿಕೆಯನು ಮಾಳ್ಪೆವೆಂ |
ದೆರಗಿ ಕೈಮುಗಿದೆಂದರಾಗ || ೩ || [ ೬೩ ]

**ಮುಖಾರಿ - ಏಕ**

ಲಾಲಿಸೈ ದೇವವರ್ಮ ಭೂಪ | ನಾವೆಂಬ ಮಾತ |
ಲಾಲಿಸೈ ದೇವವರ್ಮಾ ಭೂಪ || ಪಲ್ಲ ||
ದುರುಳ ಮತ್ಸ್ಯಾಧೀಶ ತಾನು | ವರ ರತ್ನಧ್ವಜನು |
ಧುರಕಾಗಿ ಸೇನೆ ತಂದಿಹನು ||
ಹೊರ ಬಾಗಿಲಿನಲಿ | ಉರುತರ ಶೌರ್ಯದಿ |
ಅರಿಗಳ ತಡೆದೆವು | ಶರಗಳನೆಸೆದೆವು |
ಧುರದೊಳಗೆಮ್ಮನು | ಪರಿಭವಗೊಳಿಸುತ |
ಲೊರೆದಿಹ ನಿಮ್ಮನು | ಕರೆತಾರೆನ್ನುತ || ಲಾಲಿಸೈ || ೧ || [ ೬೪ ]

**ಭಾಮಿನಿ**

ಚಾರಕರ ನುಡಿ ಕೇಳಿ ಕೆರಳಿದ |
ಮಾರಹರನಂತೆದ್ದು ರೋಷದಿ |
ಸಾರಿದನೆ ಮತ್ಸ್ಯೇಶ ತೋರುವೆನವಗೆ ಯಮಪುರವ ||
ಸೇರಿಸುತ ಸೇನೆಯನು ರಥವ |
ನ್ನೇರಿ ವಹಿಲದಿ ಬಂದು ಅರಿಗಳ |
ಕ್ರೂರ ಶರಗಳನೆಚ್ಚು ಕೆಡಹುತ ನುಡಿದನಬ್ಬರಿಸೀ || ೧ || [ ೬೫ ]

**ಶಂಕರಾಭರಣ - ಮಟ್ಟೆ**

ನೋಡಿ ನೋಡಿ ತಿರುಗಿ ರಣವ | ಮಾಡ ಬಂದೆಯ ||
ಮೂಢತನದಿ ಕೇಡನಿಂದು | ತಂದುಕೊಂಡೆಯ || ೧ ||

ಸಾಕು ಮುಚ್ಚು ಬಾಯಿ ಬಿಡೆಲೊ | ಕಾಕು ಪೌರುಷ ||
ಜೋಕೆ ಪೇಳ್ದೆ ಶರಣನಾಗು | ಪೋಕ ಧರಣಿಪ || ೨ ||

ಗಾಢ ಗರ್ವದಿಂದ ಹಿಂದೆ | ಮಾಡಿ ಸೋತೆಯ ||
ರೂಢಿಯರ್ಧ ಕಳೆದುಕೊಂಡು | ಹೇಡಿ ನಿಶ್ಚಯ || ೩ ||

ನಲಿಯದಿರೆಲೊ ಗೆಲಿದ ಹೆಮ್ಮೆ | ನಿಲಿಸಿಕೊಡುವೆನು ||
ನೆಲದೊಳರ್ಧ ಕೊಟ್ಟರೀಗ | ಕೊಲದೆ ಬಿಡುವೆನು || ೪ ||

ಕೊಲುವ ಗೆಲುವ ಬಲ ಸಮರ್ಥ | ಛಲವ ನೋಳ್ಪೆನು |
ತಲೆಯ ತರಿದು ಭೂತಗಣಕೆ | ಬಲಿಯ ಮಾಳ್ಪೆನು || ೫ ||

ಎನಲು ಕ್ರೋಧದಿಂದ ನೃಪತಿ | ಕಣೆಯ ಸುರಿಸುತ |
ರಣದಿ ಹೆಣಗೆ ದೇವವರ್ಮ | ದಣಿದು ಉರುಳಿದ || ೬ || [ ೭೧ ]

**ಭಾಮಿನಿ**
ಅರಸನೊರಗಲು ಕಂಡು ಮತ್ಸ್ಯನು |
ಪರಮ ಸಂತಸದಿಂದವಂತಿಯ |
ಧರೆಯನರಮನೆ ರಾಜ ಭಂಡಾರಗಳ | ನೊಶಗೈದಾ ||
ಇರುಳಿನಲಿ ನೃಪ ದೇವವರ್ಮನಿ |
ಗರಿವು ಬರಲೆಲ್ಲವನು ತಿಳಿಯುತ |
ಮರುಗಿದನು ಮುಂದೇನು ಗತಿಯೆಂದಳಲಿ ಮನದೊಳಗೆ || ೧ || [ ೭೨ ]

**ಆನಂದ ಭೈರವಿ - ಏಕ**
ದೇವ ಏಕಿಂತಾಯ್ತು ಶಿವನೆ |
ಆವ ಕರ್ಮಫಲದಿ ಸೋಲು | ಆಯಿತೇ | ಮಾನ | ಹೋಯಿತೇ || ೧ ||

ಸತ್ಯ ಧರ್ಮದಿಂದ ನಾನು |
ಭೃತ್ಯ ಜನರ ಪೊರೆದೆ ಶಿವನೆ | ಮರೆದೆಯಾ | ದಯ | ತೊರೆದೆಯಾ || ೨ ||

ಮರುಗಿ ಫಲವೇನಿನ್ನು ಇಲ್ಲಿ |
ಸೆರೆಯೆ ಗತಿಯು ತೆರಳ್ವದೊಳಿತು | ಮಾರ್ಗವು | ಅದೇ | ಯೋಗ್ಯವು || ೩ || [ ೭೫ ]

**ಕಂದ ಪದ್ಯ**
ವರ ರತ್ನಾಖ್ಯಂ ವಿಜಯದಿ |
ನೆರಹುತ ಸಭೆಯಂ ವಿಜಯೋತ್ಸವ ವಿರಚಿಸುತಂ ||
ವರ ಗಣಿಕಾಂಗನೆಯರನುಂ |
ಕರೆಸುತ ನಾಟ್ಯವ ನಡೆಸಿದ ವೈಭವದೊಳಗಂ || ೧ || [ ೭೬ ]

**ವಾರ್ಧಕ**
ಜನಪಾಲ ವೇಷಾಂತರದಿ ಬರಲು ಕಾಡ್ಗಿಚ್ಚು |
ವನವ ದಹಿಸಿರೆ ಧೂಮ ಜ್ವಾಲೆ ತುಂಬಿತು ವ್ಯೋಮ |
ದಿನಪನಂ ಚುಂಬಿಸುವ ತೆರ ತೋರೆ ಕಿಡಿಹಾರೆ ಸುಡುಮದ್ದು ರಾಶಿಯಂತೆ ||
ವನ ಮೃಗಗಳೋಡುತಂ ಖಗವೃಂದ ಹಾರುತಂ |
ಅನಲನುರಿಯೊಳು ಸಂದು ಭಸ್ಮವಾದವು ಬೆಂದು |
ಜನಪನಿದ ನೋಡುತ್ತ ಮನದಿ ಬಹು ಬಾಡುತ್ತ ಬರುತಿರಲು ದನಿ ಕೇಳಿತು || ೧ || [ ೭೭ ]

**ಭಾಮಿನಿ (ಅರ್ಧ)**
ಹಾ ಶಿವನೆ ಹಾ ಕೆಟ್ಟೆವಯ್ಯೋ |
ಘಾಸಿಯಹೆವೀ ಬೆಂಕಿಯಲಿ ಬಹು |
ರಾಶಿ ಪುಣ್ಯವೆ ಬಹುದು ಉಳುಹಿರಿ ವನಿತೆಯರ ಜೀವಾ || [ ೭೮ ]

**ನವರೋಜು - ಏಕ**
ವನಿತೆಯರಾ ನುಡಿ ಕೇಳಿ | ನೃಪ |
ಮನದೊಳಗೆ ವ್ಯಥೆ ತಾಳಿ ||
ಅನಲನ ಮಧ್ಯದಿ ಅಳಲುವರಾರೌ |
ಎನಿತೀ ಬೆಂಕಿಯೊಳ್ ಸಿಲುಕಿದಿರ್ ಹರ ಹರ || ೧ ||

ನೋಡಿಲ್ಲೀ ಬಿದಿರಮೆಳೆ | ಈ |
ಕಾಡಲ್ಲೀ ಇಹ ವೇಳೆ ||
ಕಾಡ್ಗಿಚ್ಚೇಳಲು ಸಿಲುಕಿದೆವಯ್ಯೋ |
ರೂಢಿಪ ದಯದೊಳು ಬದುಕಿಸು ನಮ್ಮನು || ೨ ||

ಉರಗೇಂದ್ರ ತರಳೆಯರು | ಉಪ |
ಕರಿಸುವೆವು ಕಷ್ಟದೊಳು ||
ಹರಹುತ ವಸನವ ಹಿಡಿ ನೀನದರೊಳು |
ಉರುಳುವೆವೆಮ್ಮನು ಕರುಣದಿ ರಕ್ಷಿಸು || ೩ || [ ೮೧ ]

**ಭಾಮಿನಿ**
ದೇವವರ್ಮನು ವಸನ ಪಿಡಿಯಲು |
ಹಾವುಗಳು ಹಾರಿದವು ಬಳಿಕಾ |
ಭೂವರನು ತಂದವರ ಸರಸಿಯ ಬಳಿಯೊಳುಪಚರಿಸೇ ||
ಸಾವರಿಸಿ ತಮ್ಮೆಲ್ಲ ಕಥೆಯನು |
ಭೂವರಗೆ ಪೇಳಿದವು ಬಳಿಕಾ |
ದೇವವರ್ಮನು ಪೇಳ್ದ ತನ್ನಯ ಕಷ್ಟಗಳನೆಲ್ಲ || ೧ || [ ೮೨ ]

**ಸೌರಾಷ್ಟ್ರ - ತ್ರಿವುಡೆ**
ಪಿಡಿಯುತುರಗಗಳಡವಿ ಮಾರ್ಗದಿ |
ಪೊಡವಿಪತಿ ಬರೆ ದೇವರತಿ ತಾ |
ನಡಗಿದಳು ನಾಗರತಿ ಬಳಿಕಾ | ಚಾರುರತಿಯೂ || ೧ ||

ಮುಂದೆ ಸಾಗುತ ಬರೆ ವಲ್ಮೀಕದಿ |
ಮಂದರತಿಯಡಗಿದಳು ಉಳಿದಿಹ |
ದೊಂದು ನೀಲಾವರದ ಬಳಿಯಲಿ | ನಿಂದಿತಾಗ || ೨ ||

ನರಪತಿಯು ಮುಂದರಿದನಿತ್ತಲು |
ಮೆರೆವ ಸಹ್ಯಾದ್ರಿಯಲಿ ಎಲೆಮನೆ |
ವಿರಚಿಸುತ ಮುನಿ ವ್ಯಾಘ್ರಪಾದನು | ಇರಲು ಬಳಿಕ || ೩ ||

ಮುನಿ ಪ್ರಭಾವದಿ ಜಾತಿ ವೈರಗ |
ಳನು ತೊರೆಯೆ ಖಗ ಮೃಗಗಳ್ಬೇಡರ |
ಜನರು ಭಕ್ತಿಯೊಳ್ಕಂದಮೂಲವ | ನೊದಗಿಸುವರು || ೪ || [ ೮೬ ]

**ಕಂದ ಪದ್ಯ**
ಇಂತಿರಲೊಂದಿನ ಬೇಡರ |
ಕಾಂತೆಯು ಮಾಲಿನಿಯೆನುವ ವಿಲಾಸದಿ ದಿನಪಂ ||
ಕಂತುವ ಸಮಯದಿ ಬಂದೇ |
ಕಾಂತದಿ ಮುನಿಪದಕೆರಗುತೆ ಗೀಚುತೆ ನೆಲನಂ || ೧ || [ ೮೭ ]

**ಸುರುಟಿ - ಏಕ**
ನಿಂದಿಹ ತರುಣಿಯಳ | ಕಾಣುತ |
ಲೆಂದನು ಮುನಿಪಾಲ ||
ಸುಂದರಿಯೇನೈ | ತಂದಿಹೆ ಸಂಜೆಯೊ |
ಳೆಂದೆನೆ ನಸುನಗು | ತೆಂದಳು ಮೋಹದಿ || ೧ ||

ಲಾಲಿಸು ಮುನಿಪಾಲಾ | ನೀ ದಯ |
ಪಾಲಿಸು ಗುಣಶೀಲ ||
ಮಾಲಿನಿ ಎನ್ನಭಿ | ಲಾಷೆಯ ತಿಳಿಯೆಯ |
ನೀಲಾಂಗನಿ | ಗೆಣೆ ಲೋಲನೆ ರಕ್ಷಿಸು || ೨ ||

ಅರಿತೆನು ನಾರಿಮಣಿ | ತೀರದು |
ಸ್ಮರದುರಿ ಎಲೆ ರಮಣಿ ||
ಕರಣೇಂದ್ರಿಯ ಚಾ| ಪಲ್ಯಗಳಿಲ್ಲವು |
ವರ ಕಾಮಾತುರೆ | ಹೆರವರ ನೋಡಿಕೊ || ೩ ||

ರತಿಯಭಿಲಾಷಿಯಿಹೆ | ಪಾಲಿಸು |
ಸುತನನು ಕರುಣನಿಧೇ ||
ಋತುಸಮಯವು ಇದ | ನತಿಕ್ರಮಿಸಲು ಶಿಶು |
ಹತಿಸಿದ ದೋಷವು | ಸವನಿಪುದೆಂಬರು || ೪ ||

ವಾದಕೆ ಸರಿಯಿಹುದು | ಧರ್ಮವಿ |
ದಾದರೆ ಕಾಲವಿದು ||
ಬಾಧಿಸಬೇಡೀ | ಕಾಲದಿ ಸುತನು |
ತ್ವಾದಿಸೆ ಸಜ್ಜನ | ನಾಗನು ನಿಶ್ಚಯ || ೫ || [ ೯೨ ]

**ಕೇದಾರಗೌಳ - ಝಂಪೆ**
ವನಿತೆಗದು ರುಚಿಸಲಿಲ್ಲ | ಕಾಮಾಗ್ನಿ |
ಕ್ಷಣಕ್ಷಣಕ್ಕೆ ಹೆಚ್ಚುತಲ್ಲ |
ಮನದಿ ಮದವೇರಿದಾಕೆ | ಕಾಲ್ಪಿಡಿದು |
ಮುನಿಯೆ ನಾ ಸಾಯಬೇಕೇ || ೧ ||

ಪುಸಿಯಲ್ಲ ದೇಹ ಸಹಜ | ಗುಣ ನಿದ್ರೆ |
ಹಸಿವು ಭಯ ಮೈಥುನ ನಿಜ ||
ಋಷಿಗಳಿಂದ್ರಿಯ ನಿಗ್ರಹ | ಎನ್ನಿಂದ |
ಲಸದಳವು ಕೇಳ್ ಬಿನ್ನಹ || ೨ ||

ಹಸಿವಿರಲು ಉಣದೀರ್ದಡೆ | ಹಿತವಹುದೆ |
ಹಸಿವಿಲ್ಲದಾಗುಂಡರೆ ||
ವತನವಿಲ್ಲವೆನ್ನ ತನುವು | ನರನಾಡಿ |
ಬಿಸಿಯೇರಿ ಕುದಿಯುತಿಹುದು || ೩ || [ ೯೫ ]

**ಭಾಮಿನಿ**
ಮಾಲಿನಿಗೆ ಮುನಿ ಗರ್ಭ ದಾನವ |
ಪಾಲಿಸಿದ ಬಳಿಕೆಂದ ಜನಿಸುವ |
ಬಾಲ ತಾಮಸಿ ಲೋಕ ಕಂಗೆಡೆ ದರ್ಪವಿಹುದವನ ||
ಬಾಲೆಯನು ಕಳುಹುತ್ತಲಾ ಮುನಿ |
ಪಾಲನೆಲೆಮನೆ ತ್ಯಜಿಸಿ ಪೋದನು |
ಮಾಲಿನಿಯು ತನ್ನವರ ಜತೆಯಲ್ಲಿರಲು ಒಂದು ದಿನ || ೧ || [ ೯೬ ]

**ಕಂದ ಪದ್ಯ**
ತರುಣಿಯು ಗರ್ಭಿಣಿಯಿಹುದ |
ನ್ನರಿಯುತೆ ಬಳಗಂ ಕೆರಳಿ ವಿಚಾರಿಸೆ ಮುನಿಯಂ ||
ಜರಗಿದ ದುಷ್ಕೃತಿಗವನಂ |
ತರಿಯುತೆ ಎಲೆಮನೆ ಸುಡಲೆನುತೋಡಿದರಾಗಳ್ || ೧ || [ ೯೭ ]

**ಶಂಕರಾಭರಣ - ಮಟ್ಟೆ**
ಒಡನೆ ಕೋಪದಿಂದ ಕತ್ತಿ |
ಬಡಿಗೆ ಪಿಡಿದು ಬರುತ ಹಾಳು |
ಗೆಡೆದ ಆಶ್ರಮವನು ಹೊಕ್ಕು ಹುಡುಕಿ ಸಿಗದಿರೆ ||
ಸಿಡುಕಿನಿಂದ ಮನೆಗೆ ಬೆಂಕಿ |
ಯಿಡುತ ಸುಟ್ಟು ಬಂದರ್ಬಳಿಕ |
ಹಡೆದಳವಳು ಮಾಸ ತುಂಬೆ | ಹುಡುಗನೋರ್ವನ || ೧ ||

ಸುರಿದುದಾಗ ರುಧಿರವರ್ಷ |
ಧರಣಿ ನಡುಗೆ ಉಲ್ಕೆ ತೋರೆ |
ತರಳ ಮಹಿಷನಂತೆ ಅರಚುತಿರಲು  ಕಾಣುತ ||
ಅರರಿದೇನರಿಷ್ಟವೆಂದು |
ತರಳನೊಡನೆ ಆಕೆಯನ್ನು |
ಹೊರಗೆ ಅಟ್ಟಿಬಿಟ್ಟರವರು | ಮರುಗುತಾಕೆಯೂ || ೨ ||

ಪರಶುರಾಮಕ್ಷೇತ್ರದೊಂದು |
ಅರಣ್ಯದಲ್ಲಿ ನೆಲಸೆ ಬಳಿಕ |
ತರಳ ದಿನದಿನದೊಳು ಬೆಳೆದು ಮಹಿಷನೆನಿಸಿದ ||
ತುರುಕರುಗಳ ತಿಂದು ಹೊಟ್ಟೆ |
ಹೊರೆಯುತಿರಲು ಜನರು ಹೆದರಿ |
ತೊರೆಯಲೂರು ಹಾಳುಹಾಡಿ | ಯೆನಿಸಿತಾಗಲೂ || ೩ || [ ೧೦೦ ]

**ಭೈರವಿ - ಝಂಪೆ**
ಒಂದು ದಿನ ಮಹಿಷಾಖ್ಯ | ಬಂದು ತಾಯಿಗೆ ನಮಿಸೆ |
ಕಂದನನು ಪಿಡಿದೆತ್ತಿ | ಹರಸಿ ಮುದ್ದಾಡಿ || ೧ ||

ಕಂದ ಕೇಳೈ ನಮ್ಮ | ಬಂಧುಗಳು ಹೊರಗಟ್ಟ |
ಲಿಂದು ಕಾಡಿನೊಳಿಹೆವು | ಮುಂದೇನು ಗತಿಯೂ || ೨ ||

ಎಂದವನ ಜನ್ಮ ವೃ | ತ್ತಾಂತವನು ತಿಳುಹಲ್ಕೆ |
ಚೆಂದವಾಯಿತು ತಪದಿ | ಕಮಲಜನ ವಲಿಸೀ || ೩ ||

ಬರುವೆನೆಂದೆನಲಾಕೆ | ಹರಸಿ ಕಳುಹಲು ಖಳನು |
ಉರುತರದ ತಪಗಯ್ಯು | ತಿರಲತ್ತ ಕೇಳು || ೪ || [ ೧೦೪ ]

**ಕೇದಾರಗೌಳ - ಅಷ್ಟ**
ಮೆರೆವ ದ್ರಾವಿಡದಲ್ಲಿ | ಗಿರಿಜೆಯ ಭಕ್ತ ಭೂ |
ಸುರನು ಸುದೇವ ತಾನು ||
ಧರಣಿಯನಗೆಯುತ | ಲಿರೆ ಸರ್ಪ ಸಾಯಲು |
ಹರಡಿತು ಕುಷ್ಠವ್ಯಾಧಿ || ೧ ||

ತಾಪಗೊಳ್ಳುತ ವಿಪ್ರ | ಪಾಪ ನಿವೃತ್ತಿಗೆ |
ಭೂ ಪ್ರದಕ್ಷಿಣೆ ಮಾಡುತ ||
ಆಪತ್ಬಾಂಧವ ಗುಹ | ಜಪಗೈದು ಮೂಕಾಂಬಿ |
ಕಾಪುರ ಸೇರಿದನು || ೨ ||

ಗಿರಿಜೆಯನರ್ಚಿಸಿ  ನಿರಶನ ಕೈಗೊಂಡು |
ಒರಗಿರೆ ಸ್ವಪ್ನದೊಳು ||
ಗಿರಿಜೆ ಕಾಣಿಸಿಗೊಂಡು | ತೆರಳು ಮಂದರ್ತಿಗೆ |
ವರ ಸುಬ್ರಹ್ಮಣ್ಯನಿಹ || ೩ ||

ಸರಸಿಯೊಳಗೆ ಸ್ನಾನ | ವಿರಚಿಸಿ ಗುಹನನ್ನು |
ನೆರೆ ಭಕ್ತಿಯೊಳು ಪೂಜಿಸು ||
ಉರುತರ ವ್ಯಾಧಿಯು | ಪರಿಹಾರವಪ್ಪುದು |
ತೆರಳು ಭೂಸುರ ಎಂದಳು || ೪ || [ ೧೦೮ ]

**ಸೌರಾಷ್ಟ್ರ - ತ್ರಿವುಡೆ**

ತರಣಿಯುದಯಿಸೆ ದೇವಿಪೂಜೆಯ |
ವಿರಚಿಸುತ ಭೂಸುರನು ತೆಂಕಲು |
ತೆರಳಿದನು ಮಂದರ್ತಿಗಾಗಲೆ | ಹರುಷದಿಂದ || ೧ ||

ಭಾವ ಭಕ್ತಿಯೊಳ್ ನಾಗ ತೀರ್ಥದಿ |
ಆ ವಿಬುಧ ವಿರಚಿಸುತ ಸ್ನಾನವ |
ದೇವಗುಹನನ್ನರ್ಚಿಸಿದ ಭೂ | ದೇವನಂದು || ೨ ||

ಹತ್ತಿರದ ಮರದಡಿಯೆ ಮಲಗೆ |
ಚಿತ್ತು ನೋಡಲು ರೋಗವಡಗಿರೆ |
ಪೃಥ್ವಿಸುರ ತಪಕೆಂದು ನಿಂತನು | ಸುಸ್ಥಳದಲೀ || ೩ ||

ಆದಿಶಕ್ತಿಯ ಲಿಂಗರೂಪದಿ |
ಭೂದಿವಿಜನತಿ ಭಕ್ತಿಯಿಂದಲಿ |
ಮೋದದಿಂ ಪೂಜಿಸುತ ತಪವನು | ಸಾಧಿಸಿದನು || ೪ || [ ೧೧೨ ]

**ಸಾಂಗತ್ಯ - ರೂಪಕ**

ದೇವವರ್ಮನು ಹಿಂದೆ | ಸತ್ಯ  ಧರ್ಮಗಳಿಂದ |
ಭೂವಳಯವ ಪಾಲಿಸಿದನು ||
ಹಾವುಗಳನು ಪೊರೆ | ದಾವುದೆ ಫಲವಿಲ್ಲ |
ಜೀವಿಸಲೆಂತಿಳೆಯಲ್ಲಿ || ೧ ||

ಎಂದು ಚಿಂತಿಸುತಿರ | ಲೊಂದಿನ ಸ್ವಪ್ನದಿ |
ಬಂದಾಗ ನಾಗಕನ್ಯೆಯರು ||
ನಿಂದಿಸದಿರು ಕಾಲ | ಬಂದಿಲ್ಲ ಉಪಕೃತಿ |
ಹೊಂದುವ ಕಾಲ ಮುಂದಿಹುದು || ೨ ||

ನಡೆ ನೀನು ಹೇಮಾದ್ರಿ | ಗೊಡೆಯನಾಗುವೆ ನಂಬು |
ಕಡಿವೆವು ನೃಪಸುತೆಯನ್ನು ||
ಒಡನೆ ಔಷಧ ನೀನು | ಕೊಡಲು ಜೀವಿಪಳ್ಪೇಡು |
ಪೊಡವಿಯೊಡನೆಯವಳ || ೩ || [ ೧೧೫ ]

**ಭಾಮಿನಿ**
ಎನಲು ನೃಪ ನಡೆತಂದನಿತ್ತಲು |
ಜನಪ ರಾಜಾದಿತ್ಯನೆಸೆದಿರೆ |
ಘನತರದ ಓಲಗಕೆ ನಡೆತರೆ ಸುತೆಯು ಜಲಜಾಕ್ಷಿ ||
ವನಿತೆಯನು ತಕ್ಕೈಸಿ ಬರವೇ |
ನೆನಲು ಉದ್ಯಾನಕ್ಕೆ ತೆರಳುವೆ |
ನೆನುತಲಪ್ಪಣೆಗೊಂಡು ಸಖಿಯರ ಕೂಡಿ ತೆರಳಲ್ಕೆ || ೧ || [ ೧೧೬ ]

**ತೋಡಿ - ಆದಿ**
ಹೂವ ಕೊಯ್ಯುತ ಬಂದರು | ಸುಮನಾಂಗಿಯರು |
ಹೂವ ಕೊಯ್ಯುತ ಬಂದರು || ಪಲ್ಲ ||
ತಾವರೆ ಮಲ್ಲಿಗೆ ಜಾಜಿ ಮಂದಾರವ |
ಸೇವಂತಿಗೆಯ ಪಾರಿಜಾತ ಕೇದಗೆಗಳ || ಹೂವ || ೧ || [ ೧೧೭ ]

**ಕಂದ ಪದ್ಯ**
ಪೊದರುಗಳೆಡೆಯಿಂ ಸಾರುತೆ |
ಐದುರಗಗಳುಂ ಕಡಿಯಲು ಜಲಜಾಕ್ಷಿಯಳಂ ||
ಬೆದರುತೆ ಚೀರಿದಳಾಗಲೆ |
ಸುದತಿಯರೋಡುತಲರುಹಲು ಬಂದಾ ಜನಪಂ || ೧ ||

ಮರುಗುತೆ ಮಗಳನ್ನೆತ್ತುತೆ |
ಅರಮನೆಗೊಯ್ಯುತೆ ಪರಿಪರಿಮಂತ್ರೌಷಧಿಯಿಂ ||
ಪರಿಹರ ಕಾಣದೆ ಮಗಳಂ |
ನೆರೆ ಉಳುಹಿದರಿಗೆ ಕೊಡುವೆನು ಕೇಳ್ವುದನೆಂದಂ || ೨ || [ ೧೧೮ ]

**ಸೌರಾಷ್ಟ್ರ - ತ್ರಿವುಡೆ**
ಹೊಡೆಸೆ ಡಂಗುರ ದೇವವರ್ಮನು |
ನಡೆತರುತ ವಿಷವೈದ್ಯನೆನ್ನುತ |
ಪೊಡವಿಪನ ಸುತೆಗೌಷಧಿಯ ಕೊಡ | ತೊಡಗೆ ಬಳಿಕ || ೧ ||

ದಿನದಿನಕೆ ಗುಣಹೊಂದಿತಾಗಲೆ |
ಜನಪ ಸಂತಸದಿಂದ ಕೇಳಿದ |
ನಿನಗೆ ಬೇಕಾದುದನು ಬೇಡೆನೆ | ಜನಪನೊರೆದ || ೨ ||

ಸಾವವಳ ನಾ ಬದುಕಿಸಿದೆ ನೀ |
ನೀವುದವಳನು ರಾಜ್ಯಸಹಿತೆನೆ |
ಭೂವರನು ಒಲಿದಿತ್ತನಾಗಲೆ | ಸತ್ಯಸಂಧ || ೩ ||

ಅತ್ತೆ ಮಾವಂದಿರನು ನೃಪ ಬಹು |
ಭಕ್ತಿಭಾವದಿ ಸಲಹಿಕೊಂಡಿರೆ |
ಇತ್ತ ಬಂದನು ಸರಸಿಜೋದ್ಭವ | ದೈತ್ಯನೆಡೆಗೆ || ೪ || [ ೧೨೩ ]

**ನವರೋಜು - ಏಕ**
ಬಂದಿಹ ಬ್ರಹ್ಮನ ಕಂಡು | ದೈ |
ತ್ಯೇಂದ್ರನು ಸಂತಸಗೊಂಡು ||
ವಂದಿಸಿ ನುಡಿಸಲು ಮೆಚ್ಚಿದೆ ತಪಕ್ಕೈ |
ತಂದಿಹೆ ವರಗಳ ಬೇಡೆನೆ ನಮಿಸುತ || ೧ ||

ಇರಲೆನಗೆ ನೆಲೆಯಿಲ್ಲ | ಪೇ |
ಳ್ವರು ಎನಗೆ ಕುಲವಿಲ್ಲ ||
ನರರನು ಸದೆಬಡಿ | ವರೆ ಅಮರತ್ವವ |
ಕರುಣಿಸು ಎನೆ ವಿಧಿ | ಯೊರೆದನು ದೈತ್ಯಗೆ || ೨ ||

ಒಳಿತಲ್ಲವಿದು ನಿನಗೆ | ಎನ |
ಗಳಿವುಂಟು ಜಗದೊಳಗೆ ||
ಸಲೆ ಮುನಿ ಸಾಧ್ವಿಯರ್ಗೊಡವೆಗೆ ಪೋಗದೆ |
ಉಳಿದಡೆ ಜಗದೊಳ | ಗಳಿವಿಲ್ಲಿದು ನಿಜ || ೩ ||

ಎನುತುಸುರಿ ತೆರಳಲಜ | ಬಂ |
ದನು ಮನೆಗೆ ಮಾಲಿನಿಜ ||
ಇನಿತಿದನರಿಯುತ | ದನುಜರ ಬಳಗವು |
ದಿನ ದಿನ ಬಂದೊಡಗೂಡಿತು ಮಹಿಷನ || ೪ || [ ೧೨೭ ]

**ಭಾಮಿನಿ**
ಅರಸನಾಗಿಹ ದೇವವರ್ಮನು |
ಉರಗ ಕನ್ಯೆಯರಡಗಿದೆಡೆಗಳ |
ವರುಷಕೊಂದರ ತೆರದಿ ಯಾತ್ರೆಯ ಮಾಡಿ ಬರುತೀರ್ದ ||
ಅರಸಿಯೊಡ ಮಂದರ್ತಿಗೈದುತೆ |
ಶರಜನನು ಪೂಜಿಸಿದ ಸಂತತಿ |
ಕರುಣಿಸೆನುತಲಿ ಬಳಿಕಲಾ ಮುನಿಗೆರಗಿ ಭಕ್ತಿಯಲಿ || ೧ || [ ೧೨೮ ]

**ಬೇಗಡೆ - ಏಕ**
ಕೇಳು ನರಪತಿ ಕರ್ಮ ಭೂಮಿಯಿದು | ಜನಿಸೀರ್ದ ಮನುಜನು |
ತಾಳಿ ಸತ್ಯವ ಧರ್ಮ ಪಾಲಿಪುದು ||
ಹಾಳು ಮಾಡದು ಸತ್ಯವೆಂದಿಗು |
ಮೇಲು  ಧರ್ಮವ ಪೊರೆಯೆ ಪೊರೆವುದು |
ಹಾಳುಗೈಯಲು ಕೋಳುಗೊಂಬುದು |
ಖೂಳರಿದನರಿಯದೆನೆ ಕೆಡುವರು || ೧ ||

ಕಷ್ಟ ಬಂದರೆ ಮರುಗದಿರು ಮನದಿ | ಧೈರ್ಯದಿರು ಮರೆಯದಿ |
ರಿಷ್ಟ ಸಂಪದ ಬರಲು ಅತಿಮುದದಿ ||
ಕಷ್ಟ ಸುಖಗಳ ಸಮದಿ ಭಾವಿಸು |
ಇಷ್ಟ ದೇವರ ನಂಬಿ ನಡೆದುಕೊ |
ಸೃಷ್ಟಿ ಕಲ್ಯಾಣವನು ಬಯಸುತ |
ಶ್ರೇಷ್ಠನೆಂದೆನಿಸೆನುತ ಹರಸಿದ || ೨ || [ ೧೩೦ ]

**ಕೇದಾರಗೌಳ - ಅಷ್ಟ**
ಜನಪಾಲ ಬಂದರ | ಮನೆಯೊಳು ನಿದ್ರಿಸೆ |
ಕನಸಿನೊಳ್ ವಟು ಕಾಣಿಸೀ ||
ಜನಪ ನೀ ನೋಡಿದ | ಮುನಿಯಿರುವೆಡೆ ದೇವಿ |
ಸನಿಹಿತಳಾಗಿಹಳು || ೧ ||

ಜನಪಾಲ ಪೂಜಿಸ | ಲನುವಾಗಿ ವಾರಾಹಿ |
ವನದಿಯೊಳಿಹ ಮೂರ್ತಿಯ ||
ಘನದಿ ಪ್ರತಿಷ್ಠಿಸೆ | ತನುಜರುದಿಸುವರು |
ಎನುತಂತರ್ಧಾನವಾಗೆ || ೨ ||

ಅರಸನಾಪ್ತರ ಕೂಡೆ | ಅರುಹಲೆಂದರು ಪಿತೃ |
ಶಿರಕೇರಲಂತಹುದು ||
ಬರಿದೆ ಯೋಚಿಸಬೇಡ | ವರಸ ನೀನೆಂದೆನೆ |
ಸರಿಯೆಂದು ಸುಮ್ಮನೀರ್ದ || ೩ || [ ೧೩೩ ]

**ವಾರ್ಧಕ**

ವರಬಲದಿ ಕೊಬ್ಬಿದಸುರೇಶ ಮಹಿಷಾಸುರಂ |
ತಿರುಗುತೂರೂರ ಕೊಲೆ ಸುಲಿಗೆಗಳ ನಡೆಸುತ್ತ |
ಅರಿಭಯಂಕರನೆನಿಸಿ ಮದದಾನೆಯಂತೆ ಬಲು ಹಾವಳಿಯನೆಸಗುತಿರಲು ||
ದುರುಳನನ್ನಿದಿರಿಸಿದ ರಾಜರಳಿದರು ರಾಜ್ಯ |
ವುರಿದು ಪೋದವು ಬಳಿಕಲೊಂದು ದಿನ ಖಳ ದುಷ್ಟ |
ಪರಿವಾರವೆರಸಿ ಬರಲಿತ್ತ ಜಲಜಾಕ್ಷಿ ನದಿಯೊಳು ಸ್ನಾನ ಮಾಡುತಿರಲು || ೧ || [ ೧೩೪ ]

**ಶಂಕರಾಭರಣ - ಅಷ್ಟ**

ಕಂಡನೂ | ದೈತ್ಯ ವರ ಭೂಪನರಸಿಯ | ಕಂಡನೂ || ಪಲ್ಲ ||
ಕಂಡನಾ ರತಿರೂಪಿ ನಾರಿಯ | ಮದ |
ಗೊಂಡನು ಸ್ಮರಶರಹತಿಯಾ || ಆಹಾ |
ರುಂಡಮಾಲನ ಸತಿ ರತಿ ಶಚಿ ರಮೆಯರು |
ಕಂಡರಿವಳ ಮುಂದೆ ತಲೆಯೆತ್ತಲಾಪರೆ || ಕಂಡನೂ || ಅ.ಪ ||
ಶರಜಾಕ್ಷಿ ಚಂದಿರಮುಖಿಯಾ | ಸುಳಿ |
ಗುರುಳು ಕದಪು ಕನ್ನಡಿಯಾ || ಬಿಂಬಾ |
ಧರೆ ಕುಂದರದನೆ ಭ್ರೂಲತೆಯಾ || ಕಾ |
ಳುರಗವೇಣಿಯ ಕಂಬುಗಳೆಯ || ಭಾ |
ಸುರೆ ಕೋಮಲಾಂಗಿಯ ವರ ಹಂಸಗಮನೆಯ |
ನೆರೆ ಶುಭಗಾತ್ರೆಯ | ನಿರುಪಮ ರೂಪೆಯ || ಕಂಡನು || ೧ || [ ೧೩೫ ]

**ಯಮುನಾಕಲ್ಯಾಣಿ - ಅಷ್ಟ**

ಅರರೆ ಯಾರಿವಳತಿ ವೈಯಾರಿ | ಕಂಡ |
ವರ ಮನಸೂರೆಗೊಂಬುವ ನಾರಿ ||
ಧರೆಯೊಳಗೀ ನಾರಿಗೆಣೆಯಿಲ್ಲ | ಸುರ |
ತರುಣಿಯರೊಳಗಾರೊ ತಿಳಿದಿಲ್ಲ || ೧ ||
ಪರಮ ಸುಂದರಿ ಪಿತನ್ಯಾರೀಗ | ಎನ್ನ |
ಸೇರಿಪೆಯ ಪ್ರೇಮದಿ ನೀ ಬೇಗ ||
ಧರೆಯೊಳು ಮಹಿಷಾಖ್ಯ ನಾನೀಗ | ಸ್ಮರ |
ಧುರದಿ ಸಂತೋಷಿಪೆ ಪೊರದೀಗ || ಅರರೆ || ೨ || [ ೧೩೬ ]

**ಶಂಕರಾಭರಣ - ಆದಿ**

ಧರಣಿಪಾಲ ದೇವವರ್ಮ |
ನರಸಿ ಸಲಿಲಜಾಕ್ಷಿ ನಾನು |
ತೆರಳು ನಿನ್ನ ದಾರಿ ಪಿಡಿದು | ತೊರೆದು ಆಶೆಯಾ || ೧ || [ ೧೩೭ ]

**ಕೇದಾರಗೌಳ - ಅಷ್ಟ**

ತೊರೆಯಲೇತಕೆ ಆಶೆ | ಪರಮ ಸಾಹಸಿಯೆನ್ನ |
ನರಿತಿಲ್ಲ ನೀನೀಗಲೂ ||
ಸುರನರನಾರಿಯ | ನೆರೆಯಲಾಶಿಪರೆನ್ನ |
ತ್ವರಿತದಿ ಬರಲೊಳಿತು || ೧ || [ ೧೩೮ ]

**ಶಂಕರಾಭರಣ - ಮಟ್ಟೆ**
ಮಾನಗೆಟ್ಟ ಸತಿಯರ್ಸೇರೆ |
ಮಾನವಂತೆ ಎನ್ನ ಕೆಣಕೆ |
ಮಾನವೇಶನಿಂದ ನೀನು | ಹಾನಿಪೊಂದುವೆ || ೧ ||

ಬಿಡು ಬಿಡೆಲವೊ ಪೊಡವಿಯೊಳಗೆ |
ತುಡುಕಲೆನ್ನ ಬದುಕಲುಂಟೆ |
ಹಿಡಿದು ಒಯ್ವೆನೆನುತ ದನುಜ |
ತುಡುಕೆ ನಾರಿಯೂ || ೨ || [ ೧೪೧ ]

**ಭಾಮಿನಿ**
ಬೆದರಿ ಕೂಗುತಲೋಡೆ ದನುಜರು |
ಹಿಡಿದು ತಹವೆಂದೆನುತ ಪೊರಟರು |
ಸುದತಿ ಅರಮನೆ ಸೇರಿ ಪತಿಗೆಲ್ಲವನು ಬಿತ್ತರಿಸೆ ||
ಒದಗಿನಲಿ ಸೇನೆಯನು ನೆರಹುತ |
ಕದನಸನ್ನಹ ಗೈದು ಬಂದಾ |
ಮದಮುಖರ ತಡೆಯುತ್ತಲೆಂದನು ನೃಪತಿ ಕಡು ಮುಳಿದು || ೧ || [ ೧೪೨ ]

**ಪಂಚಾಗತಿ - ಮಟ್ಟೆ**
ಎಲವೊ ದನುಜನೇಕೆ ಬಂದೆ |
ಹೊಳಲ ಮುತ್ತಿದೇನು ನಿನ್ನ |
ತಲೆಯ ತೆರದಿರೀಗ ಬರಿದೆ | ತೊಲಗಿ ಹೋಗೆಲಾ || ೧ ||

ದಾನವೇಶ ಬಯಸಿದಂಥ |
ಮಾನಿನಿಯಳನೊಯ್ಯೆ ಬಂದೆ |
ನೀನದಾರು ತಡೆಯಲೇಕೆ | ಹಾನಿ ಹೊಂದುವೆ || ೨ ||

ಮಾನಗೆಟ್ಟ ಮಾತ ನುಡಿವ |
ಹೀನ ದುರುಳ ಖಳನೆ ಎನ್ನ|
ರಾಣಿಯನ್ನು ಬಯಸೆ ನಿಮ್ಮ | ಪ್ರಾಣ ಹೀರುವೆ || ೩ ||

ಸಾರಿ ಪೇಳ್ದೆ ಕೊಡುವುದುಚಿತ |
ವೀರತನದಿ ಮಹಿಷನೊಡನೆ |
ಹೋರಿ ಬದುಕಿದವರ ಕಾಣೆ | ಧಾರಿಣೀಪತಿ || ೪ ||

ಬಾಯ ಬಡಿಕರಂತೆ ಬಗುಳಿ |
ಸಾಯಲೇಕೆ ತೊಲಗಿ ಪೋಗು |
ಸಾಯಕಗಳ ಪರಿಯ ತೋರ್ಪೆ | ನೆನುತಲೆಚ್ಚನು || ೫ ||

ಬರುವ ಶರವ ಮಹೋದರನು |
ತರಿದು ಉಗ್ರಶರದಿ ನೃಪನ |
ಕರದ ಬಿಲ್ಲ ಕಡಿಯೆ ನೃಪತಿ | ಸರಿದ ಹಿಂದಕೆ || ೬ || [ ೧೪೮ ]

**ಭಾಮಿನಿ**
ಜನಪನರಮನೆಗೋಡಿ ತನ್ನಯ |
ವನಿತೆಗಿದನರುಹುತ್ತ ವೇಗದಿ |
ಮುನಿ ಸುದೇವನ ಬಳಿಗೆ ಓಡುತಲೈದಿ ಪದಕೆರಗಿ ||
ದನುಜರುಪಟಳಗಳನು ತಿಳುಹುತ |
ಮುನಿಯೆ ಮರೆಹೊಕ್ಕಿರುವೆ ಪೊರೆಯೆನೆ |
ಜನನಿ ಕಾವಳು ನಂಬಿ ನೀನಿಹುದೆಂದು ಮುನಿ ನುಡಿದ || ೧ || [ ೧೪೯ ]

**ಸೌರಾಷ್ಟ್ರ - ತ್ರಿವುಡೆ**
ಖಳ ಮಹೋದರ ಮಂತ್ರಿ ಸೈನಿಕ |
ಬಳಗವನು ಸೋಲಿಸುತಲರಮನೆ |
ಯೊಳಗೆ ನೃಪನರಸಿಯನು ಕಾಣದೆ | ಹೊಳಲನೆಲ್ಲ || ೧ ||

ಹುಡುಕಿ ಜನರನು ಹಿಂಸಿಸುತ ಸುರೆ |
ಗುಡಿಕನೋರ್ವನ ಮುಖದಿ ತಿಳಿದನು |
ಪೊಡವಿಪತಿ ಸತಿಸಹಿತಲಡಗಿರು | ವೆಡೆಯ ಸುಳಿವ || ೨ ||

ಒಡನೆ ನಗುತ ಮಹೋದರನು ಬಂ |
ದೊಡೆಯನಿಂಗೆರಗಲ್ಕೆ ಮಹಿಷನು |
ಜಡಜಮುಖಿಯೆಲ್ಲಿಹಳು ಎನಲಾ | ಧಡಿಗನೆಂದ || ೩ || [ ೧೫೨ ]

**ಸುರುಟಿ - ಏಕ**
ಅರುಹುವೆ ಖಳರಾಯ | ನಡೆದಿಹ |
ಪರಿಗಳ ಕೇಳ್ಜೀಯಾ ||
ತರುಣಿಯನಟ್ಟುತ ತೆರಳಿದೆವಲ್ಲದೆ |
ಪುರವನು ಮುತ್ತಲು ನೃಪನೈತಂದನು || ೧ ||

ಧುರದೊಳು ಸೋತವನು | ಓಡಿದ |
ತರುಣಿಯ ಸಹಿತವನು ||
ಅರಮನೆ ತ್ಯಜಿಸುತ ನೆರೆ ಮಂದರ್ತಿಯ |
ತರಗೆಲೆ ತಿಂಬನ ಬಳಿಯಿಹನೆಂಬರು || ೨ || [ ೧೫೪ ]

**ಮಾರವಿ - ಏಕ**
ಕೆರಳುತ ಖಳಪತಿ ಚಾರಕಗೆಂದನು |
ತೆರಳೈ ಮುನಿಯೆಡೆಗೆ ||
ಮರೆ ಹೊಕ್ಕವರನು | ಕರತಂದೊಪ್ಪಿಸ |
ಲರುಹುವುದಾ ಮುನಿಗೆ || ೧ ||

ಎಂದೆನಲಾತನು ಬಂದಾ ಮುನಿಪನಿ |
ಗೆಂದನು ಮರೆ ಹೊಕ್ಕಾ ||
ಸುಂದರಿಯನು ಮಹಿಷಾಖ್ಯನಿಗೀಕ್ಷಣ |
ತಂದೊಪ್ಪಿಸು ಎನಲು || ೨ ||

ಶರಣಾಗತರನು ಮರಳಿಸೆನೆಂದಿಗು |
ಧರೆಯೊಳಗಸುವಿಡಿದು ||
ದುರಿತವಗಯ್ಯದ | ವರ ಪೀಡಿಸುವರ |
ಧರೆ ಹೊರದೆಂದರುಹು || ೩ ||

ವರಮುನಿ ಇಂತೆನೆ ತೆರಳುತ ಚಾರಕ |
ನರುಹಲು ಖಳ ಕೆರಳಿ ||
ತರಗೆಲೆ ತಿನ್ನುವ ಬರಡು ಮುನೀಶಗೆ |
ಶಿರಕಡರಿತೆ ಪಿತ್ಥ || ೪ ||

ತೆರಳು ಮಹೋದರ | ದುರುಳ ಮುನೀಶನ |
ಶಿರಕಡಿದೀಡಾಡಿ ||
ಧರಣಿಪ ದಂಪತಿಗಳನೆಳೆತಹುದೆನೆ |
ತೆರಳಿದ ಭೋರ್ಗುಡಿಸೀ || ೫ || [ ೧೫೯ ]

**ಸೌರಾಷ್ಟ್ರ - ತ್ರಿವುಡೆ**
ಮರುಳೆಲಾ ಮುನಿ ಮಹಿಷನೊಳು ಹಗೆ |
ವೆರಸಿ ಜೀವಿಪೆನೆಂಬ ಭ್ರಾಂತಿಯ |
ಬರಡು ಹೆಮ್ಮೆಯ ತೊರೆದು ಕಳುಹಿಸು | ತವರ ಬದುಕು || ೧ ||

ಶರಣು ಬಂದಿಹ ಆರ್ತರನು ನಾ |
ತೊರೆಯಲಾಗದು ಸಾವು ಬದುಕಿನ |
ಪರಿವೆಯೇಕೈ ಕೊಲುವ ಕಾಯುವ | ರಾರು ಜಗದಿ || ೨ ||

ಸಾರಿ ಹೇಳಿದೆ ಕೇಳ್ವುದುಚಿತವು |
ಮಾರಿಗೌತಣವಿಕ್ಕಿ ನಿನ್ನನು |
ನಾರಿಯಳ ಕೊಂಡೊಯ್ಯೆ ತಡೆಯುವ | ರ್ಯಾರು ಕರೆಸು || ೩ ||

ಮೂರು ಲೋಕವ ಸೃಜಿಸಿ ಪೊರೆಯುವ |
ಘೋರ ಖಳಸಂಹಾರಿ ದೇವಿಯು |
ಮೂರುಲೋಕವ ವ್ಯಾಪಿಸಿರೆ ನಾ | ಕರೆಯಲ್ಯಾಕೆ || ೪ ||

ತೋರು ನಿನ್ನಯ ಕಾವ ದೇವಿಯು |
ಸಾರಲೀಕ್ಷಣ ಅವಳ ಸಹಿತಲಿ |
ಭೋರನೆಳೆದೊಯ್ದೀಗ ಮಹಿಷಗೆ | ಮದುವೆ ಮಾಳ್ಪೆ || ೫ || [ ೧೬೪ ]

**ಭಾಮಿನಿ**
ಎನುತ ಶರಮಳೆಗರೆಯಲಾಕ್ಷಣ |
ಮುನಿಪ ಶಾಂಭವಿ ದುರ್ಗಿ ಕಾತ್ಯಾ |
ಯಿನಿ ಕಪರ್ದಿನಿ ರುಂಡಮಾಲಿನಿ ಪೊರೆ ಮಹಾದೇವೀ ||
ಎನುತ ಮೊರೆಯಿಡೆ ಮುನಿಪನಿದಿರಿಲೆ|
ಘನತರದ ವಲ್ಮೀಕವೆದ್ದಿತು |
ದನುಜನಸ್ತ್ರಗಳೆಲ್ಲ ಹುತ್ತದಿ ಹೊಕ್ಕು ಮರೆಯಾಗೆ || ೧ || [ ೧೬೫ ]

**ಕೇದಾರಗೌಳ - ಝಂಪೆ**
ದುರುಳಖಳ ಕಿಡಿಯ ಕಾರಿ | ಗದೆಗೊಂಡು |
ಎರಗಿದನು ಹುತ್ತ ಸಾರಿ ||
ವರ ದುರ್ಗಾಪರಮೇಶ್ವರಿ | ಹೂಂಕರಿಸಿ |
ಮೆರೆವಷ್ಟಭುಜದಿ ತೋರಿ || ೧ ||

ವೀರಭದ್ರನ ಕರೆಯಲು | ಆರ್ಭಟಿಸಿ |
ಸಾರಿ ಬಂದವನೆರಗಲು ||
ಮೂರು ಲೋಕವ ನುಂಗಲೂ | ನಾನೀಗ |
ಸಾರಲೇನುಸುರೆನ್ನೊಳು || ೨ ||

ಸಾರು ನೀ ವೀರೇಶನೆ | ಖೂಳನೊಳು |
ತೋರಸಮ ಶೌರ್ಯವನ್ನೆ ||
ಭೂರಿ ಹೆಮ್ಮೆಯೊಳಿರುವನು | ಸಂಹರಿಸಿ |
ಬಾರಯ್ಯ ಬೇಗ ನೀನು || ೩ ||

ನೆಲವದುರೆ ಘೋರುಗುಡಿಸಿ | ನಡೆತಂದ |
ಕಲಹಕತಿಶಯ ಸಾಹಸಿ ||
ಖಳನು ಕಾಣುತ ತವಕದಿ | ಅನುವಾದ |
ಛಲವೇರಿ ಬಲು ರೋಷದಿ || ೪ ||

ಯಾರೆಲವೊ ಖೂಳ ನೀನು | ಉಪಟಳವ |
ತೋರುತಿಹ ಕಾರಣೇನು ||
ಸಾರು ಬೇಗನೆ ಹಿಂದಕೆ | ಸೆಣಸಿದಡೆ |
ಮಾರಿಗುಣಿಸುವೆನು ಜೋಕೆ || ೫ || [ ೧೭೦ ]

**ಶಂಕರಾಭರಣ - ಮಟ್ಟೆ**
ಮಹಿಯೊಳಸಮ ವೀರನೆನಿಪ |
ಮಹಿಷಸೇನೆಗಧಿಪನಹೆನು |
ಮಹಿಷನರಸಿಗಾಗಿ ಬಂದೆ | ತಡೆವನ್ಯಾರೆಲಾ || ೧ ||

ಮಾರಹರನ ಜಟೆಯೊಳೊಗೆದ |
ವೀರಭದ್ರನೆಂಬರೆನ್ನ |
ನಾರಿಯನ್ನು ಒಯ್ಯುವದಾವ | ಧರ್ಮವುಸುರೆಲಾ || ೨ ||

ಸ್ವಾಮಿಕಾರ್ಯ ಧರ್ಮವೆನಗೆ |
ಭೂಮಿಯೊಳಗೆ ಸುಖದ ಸಾಧ |
ನಾ ಮಹೋದರಾಖ್ಯ ಗೆದ್ದು | ಸ್ವಾಮಿಗೀವೆನು || ೩ ||

ಪರನಾರಿಯರನು ಬಯಸಿ |
ದುರುಳ ರಾವಣಾಖ್ಯ ವಾಲಿ |
ಹರಣ ತೊರೆದುದರಿತು ಬಂದೆ | ಪರಮ ಪಾತಕಿ || ೪ ||

ಪಾಪ ಪುಣ್ಯ ಧರ್ಮ ಕರ್ಮ |
ಲೇಪವಿಲ್ಲ ಒಳಿತು ಕೆಡುಕು |
ಭೂಪಗಿರಲಿ ಆತನಾಜ್ಞೆ | ಗಾಗಿ ಬಂದೆನು || ೫ ||

ಪರರ ಸುಖಕೆ ಪಾಪ ಗೈವ |
ದುರುಳ ಮೂರ್ಖ ನಿಲ್ಲು ನಿನ್ನ |
ಹರಣಗೊಂಬೆನೆನುತ ಕಡಿದ | ನವನ ಶಿರವನು || ೬ || [ ೧೭೬ ]

**ಭಾಮಿನಿ (ಅರ್ಧ)**
ಖಳನ ಮರಣವ ಕಂಡು ದೂತನು |
ಅಳುತ ಬಂದಾ ಮಹಿಷಗೆರಗುತ |
ತಿಳುಹಿದನು ಸೇನಾನಿ ಮಡಿದಿಹ ದು:ಖ ಸಂಗತಿಯ || ೧ || [ ೧೭೭ ]

**ಸುರುಟಿ - ಏಕ**
ಲಾಲಿಸು ಖಳರಾಯ | ನೀ ದಯ |
ಪಾಲಿಸಭಯ ಜೀಯ ||
ಖೂಳಮುನಿಯ ತಳಿ | ರಾಲಯ ಮುತ್ತಿ ಶ |
ರಾಳಿಯನೆಸೆಯಲು | ಹೇಳುವಡಚ್ಚರಿ || ೧ ||

ತೋರಿತು ಹುತ್ತವದು | ಭೂತ ಮೈ |
ದೋರಿತು ಭೂತೆಸೆದು ||
ಭಾರಿ ಸಹಸದಿ ಮ | ಹೋದರ ಹೆಣಗಿದ |
ಸಾರಿದ ಇನಸುತ | ನೂರನು ಕದನದಿ || ೨ ||

ಚರನಿಂತೆನೆ ಖಳನು | ಮನದೊಳು |
ಕೆರಳಿದ ಬಳಿಕವನು ||
ಕರೆಯುತ ದುರ್ಮುಖ | ಗೊರೆದನು ತೆರಳೈ |
ಧುರದಲಿ ಸರ್ವರ | ತರಿಯುತ ಬಾರೆನೆ || ೩ || [ ೧೮೦ ]

**ಭಾಮಿನಿ**
ದುರುಳ ದುರ್ಮುಖ ಮನದಿ ಯೋಚಿಸಿ |
ಮೆರೆದು ಮಾಯವ ಗೆಲುವೆನೆನುತಲಿ |
ಹರಿದು ಬರತೊಡಗಿದನು ಕೆಂಡದ ಹೊಳೆಯು ತಾನಾಗಿ ||
ಪರಿಕಿಸುತ ಪರಮೇಶ್ವರಿಯು ತಾ |
ಕರೆದು ಹಾಯ್ಗುಳಿಗೆಂದಳೀಕ್ಷಣ |
ತೆರಳು ಕೆಂಡದ ನದಿಯ ಕುಡಿ ನಡೆಯೆನುತ ಕಳುಹಲ್ಕೆ || ೧ || [ ೧೮೧ ]

**ಸೌರಾಷ್ಟ್ರ - ತ್ರಿವುಡೆ**
ಗಹಗಹಿಸಿ ನಗುತೈದಿ ಹಾಯ್ಗುಳಿ |
ಗಹನವೇನೀ ಅಗ್ನಿನದಿಯಿದು |
ತುಹಿನ ಬಿಂದುವು ರವಿಗೆ ಸಾಟಿಯೆ | ಬಹಳ ಲೇಸು || ೧ ||

ಘನ ಪ್ರವಾಹದಿ ಹರಿದು ಬರುತಿಹ |
ಅನಲನನು ಹಾಯ್ಗುಳಿಯು ದೇವಿಯ |
ನೆನೆದು ಮೊಗೆ ಮೊಗೆದಾಗ ಕುಡಿದನು | ಏನನೆಂಬೆ || ೨ ||

ಕಂಡು ರಕ್ಕಸ ಬೆದರಿ ಓಡಿದ |
ಸಂದುಗಾಣದ ಶಿಲೆಯ ಕೋಟೆಯ |
ನಂದು ವಿರಚಿಸಿಯಡಗೆ ತಿಳಿದಿದ | ನೆಂದಳ್ ದೇವಿ || ೩ |

ಕಂದ ಬಾರೈ ಕಲ್ಕುಡಾಖ್ಯನೆ |
ಇಂದು ಹೋಗಾ ಕೋಟೆ ಮುರಿಯುತ |
ತಂದು ಒಪ್ಪಿಸು ಖಳನನೆನಲವ | ಬಂದನಾಗ || ೪ || [ ೧೮೫ ]

**ನಾದನಾಮಕ್ರಿಯೆ - ಅಷ್ಟ**

ಕಟ್ಟಿದ ಕೋಟೆಯ ನೋಡಿದ | ಬಹು |
ಅಟ್ಟಹಾಸದಿ ನಗೆಯಾಡಿದ ||
ತಟ್ಟನೆಯೇರಲು ತೊಡಗಿದ | ಏರಿ |
ದಷ್ಟಕು ಎತ್ತರ ಬೆಳೆವುದ || ೧ ||

ಕೆಳಕೆಳಗಿಳಿದು ರಸಾತಳ | ದಲಿ |
ತಳವನು ಕಾಣದೆ ಕಳವಳ ||
ಗೊಳುತಲಿ ದೇವಿಯ ನೆನೆದನು | ಆ |
ಶಿಲೆ  ವಿರಚಿತ ಕೋಟೆ ಮುರಿದನು || ೨ ||

ಮಾಯಾವಿಯನು ಎಳೆತಂದನು | ಮಹ |
ತಾಯಿಯ ಪಾದದಿ ಕೆಡೆದನು ||
ಆಯುಧ ಧರಿಸುತ ನಿಂದನು  | ಕಂ |
ಡಾಯತಾಂಬಕಿಗೆಂದ ಖಳನನು || ೩ ||

ಭಳಿಭಳಿರೆಲೆ ನಾರಿ ಎನ್ನೊಳು | ನೀ |
ಕೊಳುಗುಳಕಿದಿರಾಗು ಕ್ಷಣದೊಳು ||
ಎಳೆದೊಯ್ದು ಉಭಯರ ಮಹಿಷಗೆ | ಲಗ್ನ |
ಚೆಲುವಾಗಿ ಗೈಸುವೆ ಕೇಳ್ಮಗೆ || ೪ ||

ಕೆರಳುತ ದೇವಿಯು ಕ್ರೋಧದಿ | ತಾ |
ಕರೆಯಲು ಬೊಬ್ಬರ್ಯ ವೇಗದಿ ||
ಉರಿಯ ದೊಂದಿಯ ಪಿಡಿದೈದಿದ | ದೇವಿ |
ಗೆರಗಿ ಕರೆದ ಪರಿ ಕೇಳಿದ || ೫ ||

ನಡೆ ನೀನು ಧುರದೊಳು ಖಳನನು | ಬೇಗ |
ಮಡುಹುತ ಬಾರೆನಲಾತನು ||
ಪೊಡವಿಯು ನಡುಗುವ ತೆರದಲಿ | ಬೊ|
ಬ್ಬಿಡುತಲೈದಿದ ವೇಗದಲಿ || ೬ || [ ೧೯೧ ]

**ಘಂಟಾರವ - ಅಷ್ಟ**

ಭಳಿರೆ ಭಾಪುರೆ ಬಂದೆಯ ಬೊಬ್ಬರ್ಯ |
ಕಲಹದಲಿ ಕಡಿದೀಗ ನಿನ್ನಯ |
ತಲೆಯ ಚೆಂಡಾಡುವೆನು ನಿಲು ನಿಲು || ೧ ||

ಮಾಯಗಾರ ನೀನೆಂಬುದ ಬಲ್ಲೆನು |
ಸಾಯದಿರು ಎನ್ನೊಡನೆ ಕದನದಿ |
ಕಾಯುವವರನು ಕರೆಯಲಾ || ೨ ||

ಭೂತ ಪ್ರೇತಗಳಂಜಿಕೆ ಎಮಗಿಲ್ಲ |
ಯಾತುಧಾನರು ಎಮಗೆ ಸುರ ನರ |
ವ್ರಾತವಂಜುವುದರಿಯೆಯ || ೩ ||

ತೋರು ತೋರೆಲೊ ನಿನ್ನ ಪರಾಕ್ರಮ |
ಭೂರಿ ಹೆಮ್ಮೆಯ ನಿಲಿಸುತೀಗಲೆ |
ತೋರುವೆನು ಯಮನೂರನು || ೪ ||

ಭಾರಿ ವಿಕ್ರಮ ತೋರುತಲುಭಯರು |
ಹೋರುತಿರೆ ಬೊಬ್ಬರ್ಯ ಬಡಿಯಲು |
ಸಾರೆ ಖಳ ಯಮನೂರನು || ೫ || [ ೧೯೬ ]

**ಭಾಮಿನಿ**
ದುರುಳನಾ ಶವಕಿಡಲು ದೊಂದಿಯ |
ಉರಿಯ ತೊಡಗಲು ಹಾರಿ ಹಾಯ್ದುಳಿ |
ಉರಿಯ ಮೇಲಕೆ ನಲಿಯತೊಡಗಿದ ಸುರರುಘೇಯೆನಲು ||
ಅರಿದು ನಾನಾಯುಧವ ಧರಿಸುತ |
ಪರಮ ಕ್ರೋಧದಿ ಖಳನ ಸೇನೆಯು |
ಬರಲು ಚಾಮುಂಡೇಶ್ವರಿಯ ಕರೆದಾಗ ಕಳುಹಿಸಲು || ೧ || [ ೧೯೭ ]

**ವಾರ್ಧಕ**
ಛಲವೇರಿ ಗರ್ಜಿಸುತ ತುಳಿ ತುಳಿದು ಕೆಡಹುತ್ತ |
ಖಳಪಡೆಯ ಸವರುತ್ತ ನೆತ್ತರನು ಹೀರುತ್ತ |
ನಲಿ ನಲಿದು ಬರಲಿತ್ತ ಉಳಿದವರು ಪಶುರೂಪ ತಳೆಯುತ್ತ ವನದೊಳತ್ತ ||
ತಿಳಿಯುತಿದನಾ ಕ್ಷಣವೆ ಹುಲಿದೇವನಂ ಕಳುಹೆ |
ಹಳುವದಲಿ ಅಡಗಿರ್ದ ಖಳರ ಬೇಟೆಯನಾಡೆ |
ತಿಳಿದು ಖಳ ಮಹಿಷಾಖ್ಯ ತಳೆದು ಕೋಪವ ಬಂದು ಇದಿರಾದನೇನೆಂಬೆನು || ೧ || [ ೧೯೮ ]

**ಶಂಕರಾಭರಣ - ಮಟ್ಟೆ**
ತರತರಾಸ್ತ್ರವೆಸೆಯೆ ಹುತ್ತ |
ಕೆರಗಿ ಮಾಯವಾಗುತಿರಲು |
ಬೆರಗುಗೊಂಡಿದೇನೆನುತ್ತ | ನಿಂದು ನೋಡಿದ || ೧ ||

ಹುತ್ತವೊಮ್ಮೆ ದೇವಿಯೊಮ್ಮೆ |
ಮತ್ತೆ ಮತ್ತೆ ತೋರುತಿರಲು |
ಚಿತ್ತದಲ್ಲಿ ತಿಳಿದನಿದುವೆ | ಸತ್ಯ ದೇವಿಯೂ || ೨ ||

ನಾಗಸತಿಯರಿತ್ತ ಶಾಪ |
ನೀಗಲೆನುತ ಆದಿಶಕ್ತಿ |
ಆಗಮಿಸಿಹಳೆಂಬ ಜ್ಞಾನ | ವಾಗೆ ನಮಿಸುತ || ೩ || [ ೨೦೦ ]

**ಭಾಮಿನಿ**
ಉರ್ವರೆಯ ಭಾರವನು ನೀಗಿಸಿ |
ಸರ್ವ ಸಜ್ಜನರನ್ನು ಪೊರೆಯುವ |
ಸರ್ವಮಂಗಳೆ ಶಿವೆ ಸುಖಂಕರೆ ಗಿರಿಜೆ ಮಹದೇವೀ ||
ಶರ್ವೆ ಕಾತ್ಯಾಯಿನಿ ಕಪರ್ದಿನಿ |
ಪಾರ್ವತಿಯೆ ಪರಮೇಶ್ವರಿಯೆ ನೀ |
ಸರ್ವಲೋಕಶರಣ್ಯೆ ಬಂದೆಯ ತಾಯೆ ದಯೆದೋರಿ || ೧ || [ ೨೦೨ ]

**ಘಂಟಾರವ - ಏಕ**
ಕೇಳು ಶಾಂಭವಿ | ಹೀನ ಕುಲದಲಿ |
ತಾಳಿ ಜನ್ಮವ | ಖೂಳನೆನಿಸಿದೆ |
ಬಾಳಲಾರೆನು ಇನ್ನು ಲೋಕದಿ |
ತಾಳಿ ಶುದ್ಧಿಯ ಬರುವೆ ತವ ಬಳಿ || ೧ ||

ಧುರ ಪರಾಕ್ರಮಿ| ಯೆನಿಸಿ ಬದುಕಿಹೆ |
ಧರಿಸಿ ತಾಮಸ | ರಣಕೆ ನಿಂದಿಹೆ |
ಸುರರು ಮೆಚ್ಚುವ ತೆರದಿ ಸೆಣಸುವೆ |
ಹರಣವೊಪ್ಪಿಸಿ ಶರಣನೆನಿಸುವೆ || ೨ || [ ೨೦೪ ]

**ನಾದನಾಮಕ್ರಿಯೆ - ಅಷ್ಟ**
ನಿಲ್ಲು ನಿಲ್ಲೆನುತಲಿ ದೇವಿಯೂ | ಶರ |
ಚೆಲ್ಲಲು ಕಡಿಯುತ್ತ ದನುಜನು ||
ಬಿಲ್ಲನು ದನಿಗೈದು ಶರಬಿಡೆ | ಶರ |
ಚೆಲ್ಲಲು ಕಡಿಯುತ್ತ ದನುಜನು ||
ಬಿಲ್ಲನು ದನಿಗೈದು ಶರಬಿಡೆ | ಸುರ |
ರೆಲ್ಲರು ಬೆದರುತ ಕಂಗೆಡೆ || ೧ ||

ಶರಗಳ ಮುಕ್ಕಡಿಗೈದಳು | ಶಿವೆ |
ಅರುವತ್ತು ಶರಗಳನೆಸೆದಳು ||
ಸುರ ನರ ಲೋಕವ ದಹಿಸುವ | ದೆನೆ |
ಉರಿಶರವೆಸೆದನು ದಾನವ || ೨ ||

ಶರಧಿಯ ಜಲವೆಲ್ಲ ಸರಳಾಗಿ | ಬಂತೊ |
ವರುಣಾಸ್ತ್ರವಿದೊ ಎನೆ ಬಿಡಲಾಗಿ ||
ಉರಿಯಡಗಲು ನೋಡಿ ಉರಗಾಸ್ತ್ರ | ಬಿಡೆ |
ತರಿದಳು ಎಸೆಯುತ ಗರುಡಾಸ್ತ್ರ || ೩ ||

ಪರಿಪರಿ ದಿವ್ಯಾಸ್ತ್ರ ತರಿಯಲು | ಖಳ |
ಉರುತರ ಗದೆಗೊಂಡು ಎರಗಲು ||
ಚರಣದೊಳೊದೆದದ ಮುರಿದಳು | ಖಡ್ಗ |
ತಿರುಹುತ ಬರಲಾಗ ಸೆಳೆದಳು || ೪ || [ ೨೦೮ ]

**ಭಾಮಿನಿ**
ದುಷ್ಟ ತಾನೆಸೆದಸ್ತ್ರ ಶಸ್ತ್ರಗಳ್ |
ನಷ್ಟವಾಗಲು ಬಂದು ದೇವಿಯ |
ಮುಷ್ಟಿಯಿಂದೆರಗಲ್ಕೆ ಶೂಲದಿ ತಿವಿದು ಕೆಡಹಿದಳಂ ||
ಅಷ್ಟ ದಿಕ್ಪಾಲಕರು ಪೊಗಳಲು |
ಅಷ್ಟ ಹಸ್ತಾಂಕಿತೆಯ ಶಿರದಲಿ |
ಶ್ರೇಷ್ಠ ಹೂಮಳೆಗರೆದು ಜಯ ಜಯ ಎಂದರಾ ಸುರರು || ೧ || [ ೨೦೯ ]

**ಮಧುಮಾಧವಿ - ತ್ರಿವುಡೆ**
ಮಾತೆ ಕರುಣಿಪುದೆನ್ನ ಜನ್ಮದ |
ಖ್ಯಾತಿಗೀ ಹೇಮಾದ್ರಿಯಲಿ ಜನ |
ವ್ರಾತ ಪೂಜಿಸೆ ಇಷ್ಟ ಸಲಿಸುವ |
ಭೂತವೆನ್ನಿಸು ಜಗದಲಿ || ೧ ||

ದೇವಿ ಎನ್ನಯ ಬಳಿಯ ಕೆಂಡದ |
ಸೇವೆ ಮೊದಲಲಿ ಬಳಿಕ ಇಲ್ಲಿಯ |
ಸೇವೆ ನಡೆವಂತಾಗಬೇಕೆನೆ |
ದೇವಿ ನಗುತಸ್ತೆಂದಳು || ೨ || [ ೨೧೧ ]

**ಭಾಮಿನಿ**
ಜೀವ ಹಾರಿತು ಶಾಪ ಜಾರಿತು |
ದೇವಗಂಗೆಯೊಳ್ಮಿಂದು ನಂದಿಯು |
ದೇವ ಹರ ಸಾನ್ನಿಧ್ಯ ಸೇರೆ ಸುದೇವ ಮುನಿಯೊಡನೆ ||
ಭೂವರನು ಸತಿ ಸಹಿತಲೆರಗುತ |
ಭಾವ ಭಕ್ತಿಯೊಳ್ ನುತಿಸಿ ಪೂಜಿಸಿ |
ದೇವಿಗಾ ಹರಿವಾಣದಲಿ ನೈವೇದ್ಯ ಅರ್ಪಿಸಿದಾ || ೧ ||

ದೇವಿ ಸಂತಸಗೊಂಡು ನುಡಿದಳು |
ಆವಿರ್ಭವಿಸಿದ ಹುತ್ತದಲಿ ನೆಲ |
ಸೇವೆ ಪೂಜಿಪ ಭಕ್ತರಘ ಪರಿಹರಿಸಿ ಸತ್ಫಲವ ||
ಭೂವರನೆ ವಾರಾಹಿಯೊಳಗಿಹ |
ದೇವಿ ವಿಗ್ರಹ ತಂದು ನಿಲಿಸುತ |
ದೇವ ಮಂದಿರ ರಚಿಸೆ ಸತ್ಸಂತಾನ ನಿನಗಹುದು || ೨ || [ ೨೧೩ ]

**ವಾರ್ಧಕ**
ಎಂದಡಗಲಾ ದೇವಿ ಭೂಪ ಮುನಿ ಸಲಹೆಯಿಂ |
ಮಂದಿರವ ನಿರ್ಮಿಸಿದ ವಾರಾಹಿ ನದಿಯಿಂದ |
ತಂದು ದೇವಿಯ ವಿಗ್ರಹವ ಪ್ರತಿಷ್ಠಿಸಿ ಬಳಿಕ ಗಣಗಳಂ ನೆಲೆಗೊಳಿಸಲು ||
ಮಂದರತಿ ಶ್ರೀದುರ್ಗಪರಮೇಶ್ವರೀ ದೇವಿ |
ಗಿಂದು ನಮಿಸಿದ ಪೂಜಿಸಿದ ಭಕ್ತಜನರೆಲ್ಲ |
ಹೊಂದುತಿಷ್ಟಾರ್ಥ ಸಂಪದಗಳಂ ಪಡೆವಿರೆಂದಾಕಾಶ ನುಡಿ ಕೇಳಿತು || ೧ || [ ೨೧೪ ]

**ಸೌರಾಷ್ಟ್ರ - ತ್ರಿವುಡೆ**
ಸುರಗಿ ಹಳ್ಳಿಯ ಅಂತು ಎಂಬವ |
ವರ ಬಲಾಢ್ಯರ ಗುಂಪಿಗೊಡೆಯನು |
ಪರಮಧನಿಕರ ದೇವಗುಡಿಯ ದ | ರೋಡೆ ಗೈದು || ೧ ||

ಪಡೆದ ವಸ್ತು ದ್ರವ್ಯ ತನ್ನಯ |
ಪಡೆಯ ಜನ ಸಂರಕ್ಷಣೆಗೆ ಕಡು |
ಬಡವರಿಗೆ ನೀಡುತ್ತಲಿರೆ ಜನ | ನಡುಗುತಿರಲು || ೨ ||

ಹೇಳಿ ಕಳುಹುತಲಿದ್ದ ತಡೆದರ |
ಸೀಳಿ ಬಿಸುಡುತಲಿದ್ದ ಶರಣರ |
ಬಾಲ ಸತಿ ವೃದ್ಧರನು ಹಿಂಸಿಸ | ನಾಳುತನದಿ || ೩ || [ ೨೧೭ ]

**ಕಾಂಭೋದಿ - ಝಂಪೆ**
ಒಂದು ದಿನದಲಿ ಅಂತು | ಮಂದಿಗಳ ಕೂಡುತ್ತ |
ಲೆಂದ ಗುಡ್ಡೆಯ ಗಣಪದೇವ ||
ಮಂದಿರದಿ ಬಹುದ್ರವ್ಯ | ವೆಂದು ಕೇಳಿಹೆವಾವು |
ಇಂದಲ್ಲಿಗೈದೋಣವೆಂದು || ೧ ||

ಕೊಂಬು ಕಹಳೆಯು ಡೋಲು | ತಂಬಟೆಯ ಬಾರಿಸುತ |
ಮುಂಬರಿಯೆ ಆ ಗುಡ್ಡದೆಡೆಗೆ ||
ಎಂಬುದೇನಾನೆಗುಂ | ಪೆಂಬಂತೆ ಅಡ್ಡೈಸಿ |
ಮುಂಬರಿಯದಂತವರ ತಡೆಯೆ || ೨ ||

ಸಾರಿ ತೆಂಕಲು ಗುಡ್ಡ | ವೇರ ಬಯಸಲು ಆನೆ |
ತೋರಿ ತಡೆಯಲು ಅಪರದೆಸೆಯ ||
ಭೋರನೈದಲು ಕರಿಯು | ತೋರಲುತ್ತರದಲ್ಲಿ |
ಭೂರಿ ಹಸ್ತಿಯ ಕಂಡು ಮನದಿ || ೩ || [ ೨೨೦ ]

**ಕೇದಾರಗೌಳ - ಅಷ್ಟ**
ಅರರೆ ಏನಾಶ್ಚರ್ಯ | ಸರುವ ದಿಕ್ಕಿನೊಳಾನೆ |
ಗಿರಿಯೇರ ಬಿಡದಿಹುದು ||
ಕರಿಮುಖನಲ್ಲದೆ | ಪರರಲ್ಲ ದಿಟವೆಂದು |
ಅರಿತನು ಮನದಿ ಅಂತು || ೧ ||

ಧನ್ಯನಾದೆನು ದೇವ | ನಿನ್ನ ದರ್ಶನದಿ ಸಾ |
ಮಾನ್ಯರ ದೃಷ್ಟಿಯಲ್ಲಿ ||
ಅನ್ಯಾಯವೆಂದಿರೆ | ಧರ್ಮದ ಬಗೆಯಲ್ಲಿ |
ಅನ್ಯಾಯವುಂಟೆ ದೇವಾ || ೨ ||

ಧರೆಯೊಳಗಿಹುದೆಲ್ಲ | ಪರಮಾತ್ಮ ವಿರಚಿತ |
ಸರುವರ ಹಕ್ಕಿನದು ||
ಇರೆ ಧನಿಕರಲಿ ದೇ | ವರ ಗುಡಿಯಲಿ ಕೊಳೆ |
ತಿರೆ ಧನ ಸಾರ್ಥಕವೇ || ೩ ||

ದೀನ ದರಿದ್ರರಿ | ಗಾ ನಿಧಿಯುಪಯೋಗ |
ನಾನೀಗ ಮಾಡಿದರೆ ||
ನೀನಡ್ಡ ಬರುವುದ | ಕೇನೊಂದು ಕಾರಣ |
ನಾನಿಂದು ತಿಳಿಯದಾದೆ || ೪ || [ ೨೨೪ ]

**ಬೇಗಡೆ - ಏಕ**
ಕೇಳಿ ಚೋರನ ನುಡಿಯ ಗಣಪತಿಯು | ಸಂತೋಷಹೊಂದುತ |
ಪೇಳಿದನು ಸುತ್ತಲಿನ ಜನತತಿಯೂ ||
ಸಾಲು ಸಾಲಲಿ ಬಂದು ಶ್ರದ್ಧಾ |
ಶೀಲರಾರಾಧಿಪರು ಮಮ ದೇ |
ವಾಲಯವು ಸಲೆ ಸೂರೆ ಪೋದಾ |
ಮೇಲೆ ಉಳಿವುದೆ ಭಕ್ತಿ ಶ್ರದ್ಧೆಯು || ೧ ||

ಎನಿತೊ ಜನರುದ್ಧಾರವಾಗುವುದು | ದೇವಾರದಿಂದಲಿ |
ಎನಿತೊ ಜನಜೀವನವು ಸಾಗುವುದು ||
ಧನಕನಕವಿಲ್ಲದಿರೆ ಸಾಗದು |
ಘನತೆಯುಳಿಯದು ಧರ್ಮವಳಿವುದು |
ನಿನಗೆ ಮಾರ್ಗಂತಕವನೊಡ್ಡದೆ |
ಮುನಿದುದಿಲ್ಲವಪೇಕ್ಷೆಯೇನಿದೆ || ೨ ||

ದೇವನಾನಪಜಯವ ಕಂಡಿಲ್ಲ | ಕೈಗೊಂಡ ಕಾರ್ಯಗ |
ಳೀವರೆಗ ಬರಿದಾದ ಹದನಿಲ್ಲ ||
ಹೇ ವಿನಾಯಕ ನಿನ್ನ ಕಂಡುದ |
ಕಾವುದಾದರು ಕುರುಹು ಬೇಡವೆ |
ಹೇವವಲ್ಲವೆ ಬರಿದೆ ತೆರಳಲು |
ಈವುದೆನಗೇನಾದರೊಂದನು || ೩ ||

ಪರ ಕುಮಾರಕನೆಂದ ನಸುನಗುತ | ಪರಿವಾರ ತ್ಯಜಿಸುತ |
ಬರುವುದೊಬ್ಬನೆ ಮಿಂದು ಮಡಿಯುಡುತ ||
ಪರಮ ದೇವಾಲಯದೊಳಿರುತಿಹ |
ಸರಕುಗಳಲೇನಾದರೊಂದನು |
ತರುವುದುಳಿದುದ ಬಯಸಲಾಗದು |
ಗಿರಿಯನೇರಲು ದಾರಿ ಬಿಡುವೆನು || ೪ || [ ೨೨೮ ]

**ವಾರ್ಧಕ**

ಹರುಷದಿಂದಂತು ತಾ ಮಿಂದು ಮಡಿಯನ್ನುಟ್ಟು |
ಬರಿಗಯ್ಯಲೊಬ್ಬನೇರುತ ಗಿರಿಯ ದೇವ ಮಂ|
ದಿರದಿದಿರು ಸಾಷ್ಟಾಂಗವೆರಗಿ ಕೈಗಳ ಮುಗಿದು ಪರಿಪರಿಯ ಸ್ತುತಿಗೈದನು ||
ಹೊರಚಾವಡಿಯಲೊಂದು ಕಿರಿಯ ಪೆಟ್ಟಿಗೆ ಕಂಡು |
ಶಿರದೊಳದ ಹೊತ್ತೊಯ್ದು ಗಿರಿಯನಿಳಿದೈದಿದಂ |
ವರ ವಾದ್ಯರವದಿ ಬರಲಂದಿನಿಂ ಪೆಸರಾಯ್ತು ಗಿರಿಗಾನೆಗುಡ್ಡೆಯೆಂದು || ೧ || [ ೨೨೯ ]

**ಕಂದ ಪದ್ಯ**

ಸಾರಿದರೆಲ್ಲರು ತೋಷದಿ |
ತೋರಿದ ಭಾರಕೆ ಇಳಿಸುತೆ ಬಾರಾಳಿಯೊಳು ||
ಚೋರರು ಅದರೊಳು ಗಣಪತಿ |
ಮೂರುತಿ ಗೆಜ್ಜೆಯ ಸರವನು ನಿರುಕಿಸುತಾಗಂ || ೧ || [ ೨೩೦ ]

**ಸೌರಾಷ್ಟ್ರ - ತ್ರಿವುಡೆ**

ಮತ್ತೆ ತೋಷದಿ ಪೊರಟು ವಿಗ್ರಹ |
ವೆತ್ತಲದು ಬಾರದಿರೆ ಕಾಣುತ |
ಚಿತ್ತದೊಳಗಚ್ಚರಿಯ ತಾಳುತ | ನಮಿಸಿ ಪೊರಟು || ೧ ||

ಮುಂದೆ ಸರ್ವರ ಕೂಡಿ ವಹಿಲದಿ |
ಮಂದರತಿ ದೇವಾರ ಬಳಿಗೈ |
ತಂದು ದೇವಿಗೆ ಸುತ್ತು ಬರುತಲಿ | ನಮಿಸಲಾಗ || ೨ ||

ಅದರೊಳೋರುವ ಗೆಜ್ಜೆಸರ ಪಿಡಿ |
ದೊದಗಿನಿಂದಲಿ ಕುಣಿಯತೊಡಗಿದ |
ಬೆದರಿ ಪ್ರಾರ್ಥಿಸೆ ಗೆಜ್ಜೆಯೊಪ್ಪಿಸು ಎನಲು ದೇವಿ || ೩ ||

ಸಂತಸದೊಳದ ಒಪ್ಪಿಸುತಲಾ |
ಅಂತು ತೆರಳಿದ ದೇವಿ ಪೇಳ್ದಳು |
ಮುಂತೆ ವರುಷಂಪ್ರತಿಯೊಳ್ ನಡೆಸಿರಿ | ಮೇಳವನ್ನು || ೪ ||

ನಂಬಿದವರಿಷ್ಟಾರ್ಥ ಸಲಿಸುತ |
ಬೆಂಬಿಡದೆ ನಾ ಕಾವೆನೆನ್ನುತ |
ಅಂಬಿಕೆಯು ವರವಿತ್ತು ಅಡಗಿದ | ಳೆಂಬುದೇನು || ೫ || [ ೨೩೫ ]

**ಮಂಗಲ ಪದ**

ಮಂಗಲಂ | ಜಯ | ಮಂಗಲಂ || ಪಲ್ಲ ||
ಮಂಗಲ ಗಿರಿಜೆ ಮಹೇಶ್ವರಿಗೆ | ಜಯ |
ಮಂಗಲ ಶಂಕರಿ ಪಾರ್ವತಿಗೆ ||
ಮಂಗಲ ದಾಕ್ಷಾಯಿಣಿ ಶಿವೆಗೆ | ಶುಭ |
ಮಂಗಲ ಮಹಿಷಸಂಹಾರಿಣಿಗೆ | ಮಂಗಲಂ | ಜಯ | ಮಂಗಲಂ || ೧ ||

ಮಂಗಲ ಪರಾತ್ಪರೆ ಉಮೆಗೆ | ಜಯ |
ಮಂಗಲ ಕರಿರಿಪುವಾಹನೆಗೆ ||
ಮಂಗಲ ಭಕ್ತರುದ್ಧಾರಿಣಿಗೆ | ಶುಭ |
ಮಂಗಲ ಮಂದರ್ತಿ ಪರಮೇಶ್ವರಿಗೆ || ಮಂಗಲಂ | ಜಯ | ಮಂಗಲಂ || ೨ ||

ಮಂಗಲ ಪಾಶಾಂಕುಶಧರೆಗೆ | ಜಯ |
ಮಂಗಲ ವಿಘ್ನವಿನಾಶಕಗೆ ||
ಮಂಗಲ ಬಾರಾಳಿ ಗಣೇಶನಿಗೆ | ಶುಭ |
ಮಂಗಲ ಸಿದ್ಧಿವಿನಾಯಕಗೆ || ಮಂಗಲಂ | ಜಯ | ಮಂಗಲಂ || ೩ || [ ೨೩೮ ]

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ತಿಳಿದಿಲ್ಲ

**ಪ್ರಸಂಗ ಪ್ರತಿ ಆಧಾರ:** ತಿಳಿದಿಲ್ಲ

**ಪ್ರಸಂಗ ಪ್ರತಿ ಕೊಟ್ಟವರು:** ಉಮೇಶ್ ಶಿರೂರು

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ರವಿ ಮಡೋಡಿ

**ಅಂತರಜಾಲ ಪ್ರತಿ ಬರವಣಿಗೆ:** ವಸುಮತಿ ಜಿ., ರವಿ ಕಾಮತ್ ಕುಮಟಾ

**ಅಂತರಜಾಲ ಪ್ರತಿ ವಿನ್ಯಾಸ:** ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ